بِسْمِ اللهِ الرَّحْمٰنِ الرَّحِيْمِ   نَحْمَدُهٗ وَنُصَلِّی عَلٰی رَسُوْلِهِ الْكَرِيْمِ   وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

**ವರ್ಷ:** 02

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

**ಸಂಚಿಕೆ:** 27

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01 ಜುಲೈ 2021, 08 ವಫಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
27 ಝುಲ್ ಖಅ್‌ದ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ الَّذِيْنَ كَفَرُوْا لَوْ اَنَّ لَهُمْ مَّا فِي الْاَرْضِ جَمِيْعًا وَّمِثْلَهٗ مَعَهٗ لِيَفْتَدُوْا بِهٖ مِنْ عَذَابِ يَوْمِ الْقِيٰمَةِ مَا تُقُبِّلَ مِنْهُمْ ۚ وَلَهُمْ عَذَابٌ اَلِيْمٌ (سورة المائدة:37)

(ಅಲ್‌ಮಾಇದ: 37)

ಅಂದರೆ: ಅವಿಶ್ವಾಸಿಗಳಿಗೆ ಪುನರುತ್ಥಾನ ದಿನದ ಶಿಕ್ಷೆಯಿಂದ ಪಾರಾಗಲಿಕ್ಕಾಗಿ ಭೂಮಿಯಲ್ಲಿರುವ ಎಲ್ಲವನ್ನೂ ಅದರೊಂದಿಗೆ ಅಷ್ಟೇ ಬೇರೆಯನ್ನೂ ಪ್ರಾಯಶ್ಚಿತ್ತವಾಗಿ ನೀಡಲಿಕ್ಕೆ ಇದ್ದರೆ ಕೂಡ ಅವರಿಂದ ಅದು ಸ್ವೀಕೃತವಾಗದು. ಅವರಿಗೆ ಯಾತನಾಯವಾದ ಶಿಕ್ಷೆಯಿದೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

(1351) ಹಝ್ರತ್ ಜಾಬಿರ್ (ರ) ವರದಿ ಮಾಡುತ್ತಾರೆ. ಉಹದಿನ ಯುದ್ಧ ಆದ ಮೇಲೆ ನನ್ನ ತಂದೆ ಕರೆದು ಹೇಳಿದರು. ನನಗೆ ಭಾಸವಾಗುತ್ತದೆ. ನಾನು ಸಹ ನಬಿ (ಸ) ಮತ್ತು ಅವರ ಸಂಗಡಿಗರೊಂದಿಗೆ ಹತನಾಗುವೆನು. ನಾನು ರಸೂಲುಲ್ಲಾಹ್ (ಸ) ರವರ ನಂತರ ನಿನಗಿಂತ ಹೆಚ್ಚು ಯಾರನ್ನೂ ಸಹ ಪ್ರೀತಿಸುವುದಿಲ್ಲ. ನಾನು ನಿನಗೆ ಅಗಲಿ ಹೋಗುತ್ತಿದ್ದೇನೆ. ನನ್ನದು ನನ್ನ ಮೇಲೆ ಒಂದು ಋಣವಿದೆ. ಅದನ್ನು ತೀರಿಸಬೇಕು. ನಿನ್ನ ಸಹೋದರಿಯರೊಡನೆ ಒಳ್ಳೆಯದಾಗಿ ವರ್ತಿಸಬೇಕು. ನಾವು ಮುಂಜಾನೆ ಎದ್ದೆವು. ಮೊದಲು ನನ್ನ ತಂದೆಯೇ ಶಹೀದರಾಗಿದ್ದರು. ನಾನು ಅವರಿಗೆ ಗೋರಿಯಲ್ಲಿ ಧಫನ್ ಮಾಡಿದೆನು. ಅವರ ಜೊತೆಯಲ್ಲಿ ಇನ್ನೊಬ್ಬರಿದ್ದರು. ಅನಂತರ ನನ್ನ ಆತ್ಮ ಒಪ್ಪಲಿಲ್ಲ. ನಾನು ಇತರರೊಡನೆ ಅವರನ್ನು ಬಿಟ್ಟು ಬಿಡಲು. ಆದುದರಿಂದ ನಾನು ಅವರಿಗೆ ಆರು ತಿಂಗಳ ನಂತರ ತೆಗೆದೆನು. ನೋಡುವುದೇನೆಂದರೆ ಆ ದಿನ ಆನು ಹೇಗೆ ಇಟ್ಟಿದ್ದೇನು. ಹಾಗೆಯೇ ಇದ್ದರು. ಅಲ್ಪ ಸ್ವಲ್ಪ ಬದಲಾವಣೆ ಅದು ಅವರ ಕಿವಿಯಲ್ಲಿ ಹೊರತುಪಡಿಸಿ.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಲಿಲ್ಲಾಹ್ ಶಾಹ್ (ರ) ಹೇಳುತ್ತಾರೆ. ಹಝ್ರತ್ ಜಾಬಿರ್ ಅವರ ಈ ಕ್ರಿಯೆ ಅವರ ವ್ಯಕ್ತಿಗತವಾಗಿದೆ. ಅಂದರೆ ಅದು ಅವರ ತನ್ನ ಭಾವನೆಗೆ ಒಳಪಟ್ಟ ವಿಷಯವಾಗಿದೆ. ಆದುದರಿಂದ ಅದನ್ನು ಅಧಿಕೃತ (ಫತ್ವಾ) ಎನ್ನಲಾಗದು. ಕೆಲ ಧರ್ಮ ತತ್ವಜ್ಞಾನಿಗಳು ಶವವನ್ನು ಹೂಡಿದ ನಂತರ ಗೋರಿಯಿಂದ ತೆಗೆಯುವುದು ನಿಷಿದ್ಧವೆಂದಿದ್ದಾರೆ. ಇಮಾಮ್ ಬುಖಾರಿ ಈ ಫತ್ವಾ ಪರವಾಗಿ ಇಲ್ಲ.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಯಝ್, ಮುದ್ರಣ 2006 ಖಾದಿಯಾನ್)**

**Love for All, Hatred for None**

**ಹಝ್ರತ್ ರಸೂಲುಲ್ಲಾಹ್(ಸ) ರವರ ಸಹಾಬರು ತೋರಿಸಿದಂತಹ ನಿಷ್ಠೆ ಸತ್ಯಸಂಧತೆಯ ಮಾದರಿ ಇಡೀ ಲೋಕದ ಇತಿಹಾಸದಲ್ಲಿ ಕಾಣಸಿಗದು.**
**ನಾನು ನೋಡುತ್ತಿದ್ದೇನೆ. ಅಲ್ಲಾಹನು ನನ್ನ ಜಮಾಅತಿನವರಿಗೂ ಒಂದು ಉತ್ಸಾಹವನ್ನು ದಯಪಾಲಿಸಿದ್ದಾನೆ. ಅವರುಗಳು ನಿಷ್ಠೆ ಸತ್ಯಸಂಧತೆಯ ಮಾದರಿಯನ್ನು ತೋರಿಸುತ್ತಿದ್ದಾರೆ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಒಂದು ನಿಷ್ಠಾಪೂರ್ಣ ಹಾಗೂ ಪ್ರಾಮಾಣಿಕ ಜಮಾಅತ್. ನಾನು ಅಲ್ಲಾಹನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅವನು ನನಗೆ ಒಂದು ನಿಷ್ಠಾಪೂರ್ಣ ಹಾಗೂ ಪ್ರಾಮಾಣಿಕ ಜಮಾಅತನ್ನು ದಯಪಾಲಿಸಿದ್ದಾನೆ. ನಾನು ನೋಡುತ್ತಿದ್ದೇನೆ. ನಾನು ಯಾವ ಕೆಲಸಕ್ಕೆ ಮತ್ತು ಗುರಿಸಾಧನೆಗಾಗಿ ಕರೆಯುತ್ತೇನೋ ಅವರು ಅತ್ಯಂತ ವೇಗವಾಗಿ ಮತ್ತು ಉತ್ಸಾಹದಿಂದ ಒಬ್ಬರು ಮತ್ತೊಬ್ಬರಿಗಿಂತ ಮೊದಲಾಗಿ ತನ್ನ ಸಾಮರ್ಥ್ಯದನ್ವಯ ಮುಂದಾಗುತ್ತಾರೆ. ನಾನು ನೋಡುತ್ತಿದ್ದೇನೆ. ಅವರಲ್ಲಿ ಒಂದು ನಿಷ್ಠೆ, ಸತ್ಯಸಂಧತೆ ಉಂಟಾಗಿದೆ. ನನ್ನ ಕಡೆಯಿಂದ ಯಾವ ಕಾರ್ಯಕ್ಕಾಗಿ ಆಗಲಿ ಒಂದು ಸುಳಿವು ದೊರೆಯುತ್ತಲೇ ಪಾಲಿಸಲು ಸಿದ್ಧರಾಗುತ್ತಾರೆ. ವಾಸ್ತವದಲ್ಲಿ ಯಾವ ಸಮುದಾಯದಲ್ಲಿ ಮತ್ತು ಜಮಾಅತಿನಲ್ಲಿ ತನ್ನ ಇಮಾಮರ ಪ್ರತಿ ಅನುಸರಣೆ ಮತ್ತು ಪಾಲನೆಯ ಈ ಮಾದರಿಯ ಗುಣ, ನಿಷ್ಠೆ ಉತ್ಸಾಹ ಹುಟ್ಟುವುದಿಲ್ಲವೂ ಆ ಜಮಾಅತ್ ಸಿದ್ಧಗೊಳ್ಳದು. ಹಝ್ರತ್ ಮಸೀಹ್(ಅ) ರಿಗೆ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಗಿ ಬಂದ ಕಾರಣ ಅವರ ಅನುಯಾಯಿಗಳ ದುರ್ಬಲತೆ ಅಸಡ್ಡೆಯಾಗಿತ್ತು. ಅಂದ ಹಾಗೆ ಅವರನ್ನು ಸೆರೆಹಿಡಿಯಲಾದಾಗ ಪತರಸ್‌ನಂತಹ ಮಹಾನ್ ಹವಾರಿ ತನ್ನ ಗುರು, ನಾಯಕ್‌ನ ಮುಂದೆ ನಿರಾಕರಣೆಗೆ ಮುಂದಾದನು. ಅಷ್ಟೇ ಅಲ್ಲ ಮೂರು ಬಾರಿ ಶಾಪ ಹಾಕಿದನು. ಬಹುತೇಕರು ಅವರನ್ನು ಬಿಟ್ಟು ಪಲಾಯನ ಮಾಡಿದರು. ಅದರ ತದ್ವಿರುದ್ಧವೆಂಬಂತೆ ಹಝ್ರತ್ ರಸೂಲುಲ್ಲಾಹ್(ಸ) ರವರ ಅನುಯಾಯಿಗಳು (ಸಹಾಬರು) ತೋರಿಸಿದಂತಹ ನಿಷ್ಠೆ ಪ್ರಮಾಣಿಕತೆಯನ್ನು ತೋರಿಸಿದಂತಹ ಮಾದರಿ. ಇಡೀ ಲೋಕದ ಇತಿಹಾಸದಲ್ಲೂ ಕಾಣಸಿಗದು ಅವರುಗಳು ಪ್ರವಾದಿ(ಸ)ರವರ ಎಲ್ಲ ರೀತಿಯ ದುಃಖಗಳನ್ನು ಎದುರಿಸುವುದು ಸುಲಭ, ಸರಳ ಎಂದು ಬಾವಿಸಿದರು. ಎಲ್ಲಿಯರೆಗೆಂದರೆ ತಮ್ಮ ಪ್ರೀತಿಯ ಜನ್ಮಸ್ಥಾನವನ್ನು ತ್ಯಜಿಸಿದರು. ತಮ್ಮ ಆಸ್ತಿ ಪಾಸ್ತಿ, ಬಂಧು ಬಳಗದಿಂದ ಬೇರ್ಪಟ್ಟರು. ಅಂತಿಮವಾಗಿ ಪ್ರಾಣತ್ಯಾಗಕ್ಕೂ ಅಂಜಲಿಲ್ಲ. ಆ ನಿಷ್ಠೆ ಪ್ರಮಾಣಿಕತೆಯೇ ಅಂತಿಮವಾಗಿ ಅವರು ಜಯಿಸಿದಂತೆ ಮಾಡಿತು. ಅದೇ ರೀತಿ ನಾನು ನೋಡುತ್ತಿದ್ದೇನೆ. ಇದೀಗ ಅಲ್ಲಾಹನು ನನ್ನ ಜಮಾಅತಿಗೂ

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

**ಅಹ್ಮದಿಯಾ ಜಮಾಅತ್ ತನ್ನ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು ಮತ್ತು ಇಸ್ಲಾಮ್ ಧರ್ಮದ ಕಳೆದುಹೋದ ಗೌರವವನ್ನು ಮರಳಿ ತರಬೇಕು ಮತ್ತು ಮುಹಮ್ಮದ್ ರಸೂಲುಲ್ಲಾಹ್(ಸ) ರು ತೋರ್ಪಡಿಸಿದಂತಹ ಮಹೋನ್ನತ ಗುಣಗಳು ಅವರ ಅನುಯಾಯಿಗಳಲ್ಲಿ ಕಾಣುವಂತಾಗಬೇಕು, ಅದರಿಂದ ಮನುಷ್ಯನು ದೇವನನ್ನು ಕಾಣುವನು.**

ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. ಅಂತೆಯೇ "ಹಮೀದ್" (ಸ್ತುತ್ಯನು) ಪದದನ್ವಯ ಮುಸಲ್ಮಾನರು ಎಷ್ಟರಮಟ್ಟಿಗೆ ಪ್ರಶಂಸೆಗೆ ಅರ್ಹರಾದರು ಎಂದರೆ ಅದರ ಉದಾಹರಣೆ ದೊರೆಯಲಾರದು. ಮುಸಲ್ಮಾನ ಎಂಬ ಪದವೇ ಅವರ ಭರವಸೆಗೆ ಒಂದು ಸಾಕ್ಷಿಯಂತಾಗಿತ್ತು. ಅದರಲ್ಲಿ ಯಾವ ಸಂಶಯವೇ ಇರಲಿಲ್ಲ. ಅವನ ವಾಗ್ದಾನ ದೈವಿಕ ವಾಗ್ದಾನ ಎಂಬಂತೆ ಗಣಿಸಲ್ಪಡುತ್ತಿತ್ತು, ಅದನ್ನು ಯಾರಿಗೂ ಅಲ್ಲಗಳೆಯಲು ಸಾಧ್ಯವಿರಲಿಲ್ಲ. ಅವರ ಪ್ರಶಂಸೆಯ ಪ್ರತಿಧ್ವನಿ ಇಂದಿಗೂ ಕೇಳಿಬರುತ್ತದೆ. ಉದಾಹರಣೆಗೆ ಈ ಒಂದು ಘಟನೆಯೇ ತೆಗೆದುಕೊಳ್ಳಿ, ಒಂದು ಸಂದರ್ಭದಲ್ಲಿ ವ್ಯಕ್ತಿಯೊಬ್ಬನಿಂದ ಹತ್ಯೆಗೆ ಅರ್ಹನಾಗುವಂತಹ ಅಪರಾಧ ನಡೆದು ಹೋಯಿತು. ಅವನಿಗೆ ಆಗಿನ ಖಲೀಫರ ಮುಂದೆ ಹಾಜರು ಪಡಿಸಲಾಯಿತು. ಅವನಿಗೆ ಶಿಕ್ಷೆ ವಿಧಿಸಿದ ನಂತರ ಕೇಳಿಕೊಂಡನು. ನನ್ನ ಬಳಿ ಕೆಲವರ ಅಮಾನತ್ತುಗಳಿವೆ. ಅದು ನನ್ನ ಹೊರತು ಯಾರಿಗೂ ಗೊತ್ತಿಲ್ಲ. ಆದುದರಿಂದ ಒಂದು ದಿನದ ರಿಯಾಯಿತಿ ನೀಡಿ ಆ ಕೆಲಸ ಮುಗಿಸಿಕೊಂಡು ಮತ್ತೆ ಹಾಜರಾಗುವೆನು. ಖಲೀಫರು ಅವನಿಗೆ ಸಾಕ್ಷಿಯಾಗಿ ಒಬ್ಬನನ್ನು ಪ್ರಸ್ತುತಪಡಿಸಲು ಹೇಳಿದರು. ಅವನು

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

## ಅಬ್ದುಲ್ಲ ಆಥಮನು ನಾನು ಇಸ್ಲಾಮಿನ ಭವಿಷ್ಯವಾಣಿಯಿಂದ ಹೆದರಿಕೊಂಡಿಲ್ಲ ಎಂದು ಒಪ್ಪಿಕೊಂಡರೆ, ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನದ ಘೋಷಣೆ.

### ಭವಿಷ್ಯವಾಣಿಯಲ್ಲಿ ಅಬ್ದುಲ್ಲ ಆಥಮ್ ಎಂದಿಲ್ಲ ಬದಲು ಫರೀಖ್ (ದಾವೇದಾರ ಪೈಕಿ ಬೇಕು) ಎಂದಿದೆ.

ಈ ನೆಲೆಯಲ್ಲಿ ಭವಿಷ್ಯವಾಣಿ ಅತ್ಯುತ್ತಮ ರೀತಿಯಲ್ಲಿ ಪೂರ್ಣಗೊಂಡಿದೆ. ಭವಿಷ್ಯವಾಣಿಯಲ್ಲಿ ಅಬ್ದುಲ್ಲ ಆಥಮ್ ಎಂಬ ಪದವಿಲ್ಲ, ಬದಲು ದಾವೇದಾರ ಕಕ್ಷಿ ಎಂಬ ಪದವಿದೆ. ಅಲ್ಲಾಹನು ಹೇಳಿದನು. "ಯಾವ ದಾವೇದಾರನು ಉದ್ಧಟತನದಿಂದ ಸುಳ್ಳನ್ನು ನೆಚ್ಚಿಕೊಳ್ಳುವನು ಮತ್ತು ಅಲ್ಲಾಹನನ್ನು ಬಿಡುವವನು ಹಾಗೂ ದುರ್ಬಲ ಮನುಷ್ಯನೊಬ್ಬನನ್ನು ದೇವನನ್ನಾಗಿ ಮಾಡುವನು. ಅವನು ಅದೇ ದಿನಗಳಲ್ಲಿ ಚರ್ಚಾ ಅವಧಿಯ ಅನ್ವಯ ಅಂದರೆ ಒಂದು ದಿನ ಒಂದು ತಿಂಗಳಂತೆ ಅಂದರೆ 15 ತಿಂಗಳವರೆಗೆ ಹಾವಿಯಾ (ನರಕಾಗ್ನಿ) ಯಲ್ಲಿ ಹಾಕಲ್ಪಡುವನು ಮತ್ತು ಅವನಿಗೆ ಘೋರ ರೀತಿ ಅಪಮಾನ ಉಂಟಾಗುವುದು. ಶರತ್ತೇನೆಂದರೆ ಸತ್ಯದೆಡೆ ರುಜುಪಡಿಸಿಕೊಳ್ಳಬಾರದು." ಅಂದ ಹಾಗೆ "ದಾವೇದಾರರ ನೆಲೆಯಲ್ಲಿ ಭವಿಷ್ಯವಾಣಿ ಯಾವ ರೀತಿಯಲ್ಲಿ ಪೂರ್ಣಗೊಂಡಿದೆ ಎಂಬುದನ್ನು ಈ ಕೆಳಗಿನ ವಿವರಗಳನ್ನು ನೋಡಿ.

### ಫಾದರಿ ರಾಯಿಟ್‌ನ ಅಕಾಲಿಕ ಮರಣ ಮತ್ತು ಕ್ರೈಸ್ತರಲ್ಲಿ ಸೂತಕ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಇದು ಮಿಸ್ಟರ್ ಅಬ್ದುಲ್ಲ ಆಥಮ್‌ನ ಅವಸ್ಥೆ ಆಯಿತು. ಆದರೆ ಅವರ ಉಳಿದ ಸಂಗಡಿಗರು ಸಹ ಚರ್ಚೆಯಲ್ಲಿ ಭಾಗೀದಾರರಾಗಿದ್ದರು. ಜಂಗಿ ಮುಖದ್ದಸ್ ಚರ್ಚಾಕೂಟದಲ್ಲಿ ಸಂಬಂಧ ಹೊಂದಿದ್ದರು. ಆ ಸಂಬಂಧ ಸಹಾಯಕನ ರೂಪದಲ್ಲಿ ಆಗಲಿ ಅಥವಾ ಪಕ್ಷವಹಿಸುವ, ಅಥವಾ ಚರ್ಚೆಯ ಪರವಾಗಿ ವಾದಿಸುವ, ಅಥವಾ ನಾಯಕರಾದ ಅವರಲ್ಲಿ ಯಾರೂ ಸಹ ನರಕಾಗ್ನಿಯ ಪ್ರಭಾವದಿಂದ ಉಳಿಯಲಿಲ್ಲ. ಅವರೆಲ್ಲರೂ ಅವಧಿಯ ಒಳಗೆ ತಮ್ಮ ತಮ್ಮ ಅವಸ್ಥೆಯ ಪ್ರಕಾರ ನರಕಾಗ್ನಿಯ ರುಚಿ ಕಂಡರು. ಅಂದ ಹಾಗೆ ಅಲ್ಲಾಹನು ಮೊದಲು ಪಾದರಿ ರಾಯಿಟ್‌ನನ್ನು ತೆಗೆದುಕೊಂಡನು. ಅವರು ಅಕಾಲಿಕ ಮರಣಕ್ಕೆ ತುತ್ತಾದರು. ಅವರು ವಾಸ್ತವದಲ್ಲಿ ಆ ಪಕ್ಷದ ಮುಖಂಡರಾಗಿದ್ದರು. ಅವರು ಯೌವನಾವಸ್ಥೆಯಲ್ಲಿ ಅಕಾಲಿಕ ಮರಣಕ್ಕೆ ಗುರಿಯಾದರು. ಅಲ್ಲಾಹನು ಈ ಅಕಾಲಿಕ ಮರಣದಿಂದ ಡಾ॥ ಮಾರ್ಟಿನ್ ಕ್ಲಾರ್ಕ್ ಮತ್ತು ಅವರ ಇತರ ಎಲ್ಲಾ ಸಂಗಡಿಗರಿಗೆ ಮತ್ತು ಮಿತ್ರರಿಗೆ ದೊಡ್ಡ ಆಘಾತ ನೀಡಿದನು. ಶೋಕದ ವಸ್ತ್ರಗಳನ್ನು ತೊಡಿಸಿದನು. ಅವರ ಅಕಾಲಿಕ ಮರಣ ಎಂತಹ ದುಃಖಕ್ಕೆ ಗುರಿ ಮಾಡಿತೆಂದರೆ ಅದು ನರಕಾಗ್ನಿಗಿಂತಲೂ ಕಡಿಮೆಯೇ ಇರಲಿಲ್ಲ. (ನೂರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–9, ಪುಟ–8)

ನಿಜ ಹೇಳಬೇಕೆಂದರೆ ಈ ಭವಿಷ್ಯವಾಣಿಯ ನಂತರ ಪಾದರಿಗಳ ಮೇಲೆ ಘೋರ ಅಪಮಾನದ ದಾಳಿಯಾಯಿತು. ಭವಿಷ್ಯವಾಣಿಯ ಅವಧಿಯಲ್ಲಿಯೇ ಪಾದರಿ ರಾಯಿಟ್‌ನ ಅಪ್ಪಟ ಯೌವನ ಸ್ಥಿತಿಯಲ್ಲಿ ನರಕ ದರ್ಶನಕ್ಕಾಗಿ ಈ ಲೋಕದಿಂದ ಕರೆಯಿಸಿಕೊಳ್ಳಲಾಯಿತು. ಅವರ ಈ ಮರಣದಿಂದ ಕ್ರೈಸ್ತರಿಗೆ ಎಷ್ಟರಮಟ್ಟಿಗೆ ದುಃಖವಾಗಿದೆ ಎಂದರೆ ಅದನ್ನು ಸ್ವಯಂ ಕ್ರೈಸ್ತರೇ ಒಪ್ಪಿಕೊಂಡರು. ಇದೊಂದು ದೈವಿಕ ಶಿಕ್ಷೆ ಆಗಿದೆ ಎಂದು. (ಅದೇ ಪುಟ 83)

### ಪಾದರಿ ಟಾಮಸ್ ಹಾವೆಲ್, ಪಾದರಿ ಅಬ್ದುಲ್ಲ ಮತ್ತು ಇತರ ಪಾದರಿಗಳು ನರಕಾಗ್ನಿಯ ರುಚಿ ಕಂಡವರಾಗಿದ್ದಾರೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

"ಅಂತೆಯೇ ಪಾದರಿ ಹಾವೆಲ್ ಸಹ ದೀರ್ಘ ಅವಧಿಯವರೆಗೆ ರೋಗಗಳಿಗೆ ತುತ್ತಾಗಿ ಮರಣ ಸಮಾನ ತೊಂದರೆಗಳಿಗೆ ಈಡಾಗಿ ಉಳಿದನು. ಪಾದರಿ ಅಬ್ದುಲ್ಲ ಸಹ ಘೋರ ರೋಗಗಳಿಗೆ ಬಲಿಯಾಗಿ ನರಕಾಗ್ನಿ ಅನುಭವಿಸಿದನು. ಎಲ್ಲಿಯವರೆಗೆಂದರೆ ಅವರಲ್ಲಿ ಯಾರೂ ಸಹ ದುಃಖ, ಆಪತ್ತು ಮತ್ತು ಅಪಮಾನಗಳಿಗೆ ಈಡಾಗದೆ ಉಳಿಯಲಿಲ್ಲ. ಅಷ್ಟೇ ಅಲ್ಲ ಅದೇ ದಿನಗಳಲ್ಲಿ ಅಲ್ಲಾಹನು ಒಂದು ವಿಶೇಷ ರೀತಿಯಲ್ಲಿ ಕಠಿಣ ಅಪಮಾನ ಮತ್ತು ಅವಮಾನಕ್ಕೆ ಗುರಿಪಡಿಸಿದನು. ಅದರಿಂದ ಅವರ ಮೂಗು ಮುರಿದಂತಾಯಿತು ಮತ್ತು ಅವರು ಮುಸಲ್ಮಾನರಿಗೆ ಮುಖ ತೋರಿಸಲು ಲಾಯಕ್ಕಿರಲಿಲ್ಲ. ಏಕೆಂದರೆ ನಾನು ಅಲ್ಲಾಹನಿಂದ ಅನುಗ್ರಹ ಪಡೆದು ಕ್ರೈಸ್ತ ಪಾದರಿಗಳ ಜಾತಕ ಬಿಚ್ಚಿಡಲು ಅವರ ಜ್ಞಾನದ ಮಟ್ಟ ಬಯಲು ಮಾಡಲು ಮತ್ತು ಈ ಮಾತನ್ನು ಸ್ಪಷ್ಟಪಡಿಸಲು–ಖುರ್‌ಆನ್ ಮತ್ತು ಇಸ್ಲಾಮ್ ಮೇಲೆ ಆಕ್ರಮಣ ತಡೆಯಲು ಭಾಷಾ ಪಾಂಡಿತ್ಯದ ಅವಶ್ಯಕತೆ ಇದೆ. ಈ ಜನರು ಅರಬಿ ತಿಳಿಯದವರಾಗಿದ್ದಾರೆ. ಅರಬಿ ಸಾಹಿತ್ಯದಲ್ಲಿ "ನೂರುಲ್ ಹಖ್" ಎಂಬ ಒಂದು ಗ್ರಂಥ ಬರೆದು ಇಮಾಮುದ್ದೀನ್ ಮತ್ತು ಇತರ ಎಲ್ಲ ಪಾದರಗಳಿಗೆ ರಿಜಿಸ್ಟ್ರರ್ ಪತ್ರಗಳನ್ನು ಕಳುಹಿಸಿದೆ. ನಿಮಗೆ ಅರಬಿ ಪಾಂಡಿತ್ಯದ ತಿಳುವಳಿಕೆಯಿದ್ದರೆ, ಇಸ್ಲಾಮಿ ಸಮಸ್ಯೆಗಳನ್ನು ತಿಳಿಯಲು ಮತ್ತು ಖುರ್‌ಆನ್‌ನ ಸಾಹಿತ್ಯದ ಮೇಲೆ ಆಕ್ರಮಣ ಅವಶ್ಯವೆಂದು ಭಾವಿಸಿದರೆ ನನ್ನ ಗ್ರಂಥದ ಎದುರಿಗೆ ಇಂತಹ ಒಂದು ಅರಬಿ ಗ್ರಂಥ ಬರೆದು ತೋರಿಸಿ ಮತ್ತು ಐದು ಸಾವಿರ ರೂಪಾಯಿಗಳ ಬಹುಮಾನ ಪಡೆಯಿರಿ. ಪಾದರಿ ಇಮಾಮುದ್ದೀನ್ ಮತ್ತು ಇತರ ಎಲ್ಲ ಪಂಜಾಬ್ ಮತ್ತು ಭಾರತದ ಕ್ರೈಸ್ತ ಮೌಲ್ವಿ ಅಂದುಕೊಳ್ಳುವ, ಅರಬಿ ಪಂಡಿತ ಅಂದುಕೊಳ್ಳುವವರು ಉತ್ತರ ಬರೆಯಲು ಸಾಧ್ಯವಾಗಲಿಲ್ಲ.........ಇದೀಗ ವಿವೇಕಯುಳ್ಳವರು ಭಾವಿಸಬಹುದು. ಅವರೆಲ್ಲರಿಗೆ ನರಕಾಗ್ನಿ ಲಭ್ಯವಾಯಿತೆ ಅಥವಾ ಏನಾದರೂ ಬಾಕಿ ಇದೆಯೇ? (ಅದೇ ಪುಟ–08)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಎರಡು ಪಕ್ಷದಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವವರ ಪೈಕಿ ಓರ್ವರಾದ ಪಾದರಿ ಟಾಮಸ್ ಹಾವೆಲ್ ಅವರು ಪದೇ ಪದೇ ಹಸ್ತಕ್ಷೇಪಿತ ಗ್ರಂಥಗಳನ್ನು ತನ್ನ ಕಂಠ ಬೀಗಿಕೊಂಡು ಓದುತ್ತಿದ್ದ. ಮತ್ತು ಜರ ತಲೆಯನ್ನು ತಿಂದುಬಿಟ್ಟ. ಅವನು ಚರ್ಚೆಯ ನಂತರ ಹೇಗೆ ಹಿಡಿತಕ್ಕೆ ಒಳಪಟ್ಟಿದ್ದನೆಂದರೆ ಘೋರ ಕಾಯಿಲೆಗೆ ತುತ್ತಾಗಿ ಸಾಯುವುದೊಂದೇ ಬಾಕಿ ಇತ್ತು. ಇನ್ನೊಬ್ಬ ಸಹಾಯಕ ಪಾದರಿ ಅಬ್ದುಲ್ಲ ಸುಖಾ ಸುಮ್ಮನೆ ಪವಿತ್ರ ಖುರ್‌ಆನ್‌ನ ವಚನ ತೋರಿಸುತ್ತಿದ್ದ ಮತ್ತು ಇರಾನಿ ಭಾಷೆಯ ಅಕ್ಷರಗಳನ್ನು ತೊದಲುತ್ತ ಓದುತ್ತಿದ್ದ. ಅವನು ಸಹ ಅವಧಿಯ ಒಳಗೆಯೇ ಘೋರ ರೋಗಕ್ಕೆ ತುತ್ತಾದ ಮತ್ತು ಸಾವಿನ ಸಮೀಪ ತಲುಪಿದ. ಸತ್ತರೋ, ಉಳಿದರೋ, ಗೊತ್ತಿಲ್ಲ, ಇನ್ನುಳಿದವರು ಪಾದರಿ ಇಮಾಮುದ್ದೀನ್ ಅವರ ಕೊರಳಲ್ಲಿ ಸಾವಿರ ಶಾಪಗಳ ಅಪಮಾನಜನಕ ಉದ್ದವಾದ ಹಗ್ಗ ಜಗಿದಂತಾಯಿತು. ಅವರು ನೂರುಲ್‌ಹಖ್ ಗ್ರಂಥಕ್ಕೆ ಉತ್ತರ ಬರೆಯದೇ ಅವರಿಗೆ ಮತ್ತು ಅವರೆಲ್ಲ ಸಹೋದರರಿಗೆ ಅಪಮಾನವೇ ದಕ್ಕಿತು. ಈಗ ಹೇಳಿರಿ. ಆ ಪಕ್ಷದ ಎಲ್ಲ ಸದಸ್ಯರಲ್ಲಿ ಒಬ್ಬರಾದರು ನರಕಾಗ್ನಿಯಿಂದ ಉಳಿದವರಿದ್ದರೆ ಅವರ ಗುರುತು ತೋರಿಸಲಿ. (ಅದೇ ಪುಟ 60)

### ಎಲ್ಲವೂ ಅಲ್ಲಾಹನ ದಿವ್ಯವಾಣಿಯ ವಾಗ್ದಾನದಂತೆಯೇ ಘಟಿಸಿತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ಮತ್ತೆ ಗಮನದಲ್ಲಿರಲಿ. ನರಕಾಗ್ನಿಯಲ್ಲಿ ಬೀಳುವ ನಿಜವಾದ ಭಾವ ದಿವ್ಯವಾಣಿಯಲ್ಲಿದ್ದಂತೆ ಅಬ್ದುಲ್ಲ ಆಥಮರು ತನ್ನ ಕೈಯಿಂದ ಪೂರ್ಣಗೊಳಿಸಿಕೊಂಡಿದ್ದಾರೆ. ಯಾವ ರೀತಿ ಅವರು ಆಪತ್ತುಗಳಿಗೆ ಗುರಿಮಾಡಿಕೊಂಡರು. ಯಾವ ರೀತಿ ಸತತವಾಗಿ ಗಾಬರಿಯ ಶೃಂಖಲೆ ಅವರ ಬೆನ್ನು ಹತ್ತಿದೆ ಮತ್ತು ಭಯವು ಅವರ ಹೃದಯಕ್ಕೆ ತಟ್ಟಿತು. ಅದುವೇ ನಿಜವಾದ ನರಕಾಗ್ನಿ ಆಗಿತ್ತು. ಮರಣದ ಶಿಕ್ಷೆ ಅಂತಿಮಘಟ್ಟವಾಗಿದೆ. ಅದರ ವಿವರ ದಿವ್ಯವಾಣಿಯ ಬರಹದಲ್ಲಿಯೂ ಇಲ್ಲ. ನಿಸ್ಸಂಶಯವಾಗಿ ಈ ಆಪತ್ತು ನರಕಾಗ್ನಿಯೇ ಆಗಿತ್ತು. ಅದನ್ನು ಅಬ್ದುಲ್ಲ ಆಥಮ್ ತನ್ನ ಅವಸ್ಥೆಗಳ ನಿಮಿತ್ತ ಅನುಭವಿಸಿದನು. ಆದರೆ ಆ ಮಹಾ ನರಕಾಗ್ನಿ, ಅದು ಮರಣವಾಗಿತ್ತು. ಅದರಿಂದ ಉಳಿಯಲು ಕಾರಣ ಅವರು ಸತ್ಯದ ಪ್ರಭಾವಕ್ಕೆ ಒಳಗಾಗಿ ಅದರ ಭಯ ಆವರಿಸಿಕೊಂಡಿದ್ದು. ಅದು ಅಲ್ಲಾಹನ ದೃಷ್ಟಿಯಲ್ಲಿ, ಭವಿಷ್ಯವಾಣಿಯಲ್ಲಿ ವಿಧಿಸಲಾಗಿದ್ದ ಶರತ್ತನ್ನು ಪಾಲಿಸಿದಂತಾಗಿತ್ತು. ಇನ್ನುಳಿದ ವಿಷಯವೇನೆಂದರೆ ಎಲ್ಲವು ಅಲ್ಲಾಹನ ದಿವ್ಯವಾಣಿಯ ವಾಗ್ದಾನದಂತೆಯೇ ಘಟಿಸಿತು." (ಅದೇ ಪುಟ 5)

### ಒಂದು ನಿರ್ಣಾಯಕ ಸಲಹೆ ಹಾಗೂ ಅಬ್ದುಲ್ಲ ಆಥಮನಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ಘೋಷಣೆ.

ವಿರೋಧಿಗಳು ಹೇಳಬಹುದು. ನೀವು ಸುಳ್ಳುಗಾರರು, ನಿಮ್ಮ ದಿವ್ಯವಾಣಿಯು ಸುಳ್ಳು, ಆಥಮನು ಸತ್ಯದೆಡೆ ರುಜುಪಡಿಸಲಿಲ್ಲ. ಆಥಮನು ನಿಜವಾಗಿಯೂ ಸತ್ಯದೆಡೆ ರುಜುಪಡಿಸಿಕೊಂಡಿದ್ದನೆ ಎಂಬ ನಿರ್ಣಯ ಹೇಗೆ ಆಗಲು ಸಾಧ್ಯ? ಈ ನಿರ್ಣಯಕ್ಕಾಗಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ಕೆಳಗಿನ ಸಲಹೆಯನ್ನು ಮುಂದಿಟ್ಟರು. ಮತ್ತು ಅದಕ್ಕಾಗಿ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪ್ರವಾದಿ ಮುಹಮ್ಮದ್(ಸ) ಹೇಳಿದರು: ಈ ಸಮಯದಲ್ಲಿ ನನಗೆ ಎಂತಹ ಸೂರಃ ಅವತೀರ್ಣವಾಗಿದೆ ಎಂದರೆ ಅದು ಜಗತ್ತಿನ ಎಲ್ಲ ವಸ್ತುಗಳಿಗಿಂತ ನನಗೆ ಹೆಚ್ಚು ಪ್ರಿಯವಾಗಿದೆ. ನಂತರ ಅವರು ಸೂರಃ ಫತಹ್‌ವಿನ ವಚನಗಳನ್ನು ಪಠಿಸಿದರು. ಹಝ್ರತ್ ಉಮರ್ ಕೇಳಿದರು: ಯಾ ರಸೂಲಲ್ಲಾಹ್! ಈ ಒಪ್ಪಂದವು ನಿಜವಾಗಿಯೂ ಇಸ್ಲಾಂ ಧರ್ಮದ ವಿಜಯವೇ? ಅವರು ಹೇಳಿದರು: ಹೌದು, ಖಂಡಿತವಾಗಿಯೂ ಇದು ನಮ್ಮ ಗೆಲುವು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝುಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಸುಲಹ್ ಹುದೈಬಿಯಾದ ಸಂದರ್ಭದಲ್ಲಿ ಮುಸ್ಲಿಮರ ಹಾಗೂ ಮಕ್ಕದ ಖುರೈಶರ ನಡುವೆ ಬರೆಯಲ್ಪಟ್ಟ ಒಪ್ಪಂದದ ಮೇಲೆ ಹಝ್ರತ್ ಉಮರ್(ರ) ರವರ ಹಸ್ತಾಕ್ಷರವೂ ಇದ್ದವು**

**ಐದು ದಿವಂಗತರಾದ ಮಲಿಕ್ ಮುಹಮ್ಮದ್ ಯೂಸುಫ್ ಸಲೀಂ ಸಾಹಿಬ್, ಖಾದಿಯಾನಿನ ಬಶೀರ್ ಅಹ್ಮದ್ ಕಾಲಾ ಅಫ್‌ಘಾನ್ ದರ್ವೇಶರ ಮಗನಾದ ಸನ್ಮಾನ್ಯ ಶುಐಬ್ ಅಹ್ಮದ್ ಸಾಹಿಬ್, ಸನ್ಮಾನ್ಯ ಮಖ್‌ಸೂದ್ ಅಹ್ಮದ್ ಭಟ್ಟಿ ಸಾಹಿಬ್, ಫೈಸಲಾಬಾದಿನ ಜಾವೇದ್ ಇಕ್ಬಾಲ್ ಸಾಹಿಬ್, ಮತ್ತು ಗಾನದ ಮುಬಲ್ಲಿಗ್‌ರಾದ ನವಾಝ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಮದೀಹ ನವಾಝ್ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–06–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ಖುತ್‌ಬಗಳಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಮತ್ತು ಯುದ್ಧಗಳ ಹಾಗೂ ದಂಡಯಾತ್ರೆಗಳ ಪ್ರಸ್ತಾಪ ನಡೆಯುತ್ತಿತ್ತು. ಹಮ್‌ರಉಲ್ ಅಸದ್ ಯುದ್ಧದ ಬಗ್ಗೆ ಹೀಗೆ ಬರುತ್ತದೆ ಉಹದ್ ಯುದ್ಧದ ನಂತರ ರಸೂಲುಲ್ಲಾಹ್(ಸ) ರವರು ಮದೀನಕ್ಕೆ ಹಿಂದಿರುಗಿ ಬಂದರು. ಕುಫ್ಫಾರರು ಮದೀನಕ್ಕೆ ಹಿಂದಿರುಗಿದರು ಆದರೆ ಪ್ರವಾದಿ(ಸ)ರನ್ನು ಖುರೈಶಿಗಳು ಮತ್ತೊಮ್ಮೆ ಸೈನ್ಯವನ್ನು ತಯ್ಯಾರು ಮಾಡುತಿರುವುದನ್ನು ತಿಳಿದಾಗ ಪ್ರವಾದಿ(ಸ)ರವರು ಸಹಾಬರವರೊಂದಿಗೆ ಹಮ್‌ರಾಉಲ್ ಅಸದ್ ಎಂಬಲ್ಲಿಗೆ ತಲುಪಿದರು. ಹಮ್‌ರಾಉಲ್ ಅಸದ್ ಮದೀನದಿಂದ 8 ಮೈಲಿ ದೂರದಲ್ಲಿದೆ.

ಈ ಯುದ್ಧದ ಕುರಿತು ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆಯುತ್ತಾರೆ: ಖುರೈಶರ ಸೈನ್ಯವು ತೋರಿಕೆಗೆ ಮದೀನಕ್ಕೆ ಮರಳಿಹೋದರು. ಅವರ ಈ ಕೃತ್ಯವು ಮುಸ್ಲಿಮರನ್ನು ವಂಚಿಸುವುದಕ್ಕೆ ಇರಬಹುದು ಎಂದು ಸಂದೇಹಪಟ್ಟಿ ಆ ರಾತ್ರಿ ಮದೀನದಲ್ಲಿ ಕಾವಲು ನೀಡಲಾಯಿತು ವಿಷೇಶವಾಗಿ ಪ್ರವಾದಿ(ಸ)ರವರ ಮನೆಯನ್ನು ಸಹಾಬರವರು ಇಡೀ ರಾತ್ರಿ ಕಾವಲು ನೀಡಿದರು. ಮುಂಜಾನೆ ಈ ಸಂದೇಹವು ಕಾಲ್ಪನಿಕ ಎಂದು ಸ್ಪಷ್ಟವಾಯಿತು. ಏಕೆಂದರೆ ಫಜರ್ ನಮಾಝ್‌ನ ಮುಂಚೆ ಪ್ರವಾದಿ(ಸ)ರವರನ್ನು ಖುರೈಶರು ಮದೀನದಿಂದ ಕೆಲವು ಮೈಲು ದೂರ ಹೋಗಿ ತಂಗಿದ್ದಾರೆ ಎಂದು ಸಮಾಚಾರ ಲಭಿಸಿತ್ತು. ಖುರೈಶರ ನಾಯಕರಲ್ಲಿ ಕೆಲವರು ಹೇಳಿದರು ಈ ವಿಜಯದಿಂದ ಪ್ರಯೋಜನ ಪಡೆಯುತ್ತ ಮದೀನಾವನ್ನು ಏಕೆ ಆಕ್ರಮಣ ಮಾಡಬಾರದು ಎಂದು ಚರ್ಚೆ ಮಡುತ್ತಿದ್ದರು ಮತ್ತು ಕೆಲವು ಖುರೈಶರು ನೀವು ಮುಹಮ್ಮದ್(ಸ) ರನ್ನು ಕೊಲ್ಲಲಿಲ್ಲ ಅಥವಾ ಮುಸ್ಲಿಂ ಮಹಿಳೆಯರನ್ನು ಗುಲಾಮರನ್ನಾಗಿ ಮಾಡಲಿಲ್ಲ ಅಥವಾ ಅವರ ಆಸ್ತಿಯನ್ನು ನೀವು ವಶಪಡಿಸಿಕೊಂಡಿಲ್ಲ ಎಂದು ಪರಸ್ಪರ ದೂಷಿಸುತ್ತಿದ್ದರು. ನೀವು ಅವರ ಮೇಲೆ ವಿಜಯಶಲಿಯಾದರೂ ಸಹ ನೀವು ಅವರನ್ನು ನಶಿಸಲಿಲ್ಲ ಅವರನ್ನು ಬಿಟ್ಟು ಹಿಂದಿರುಗಿದ್ದೀರಿ, ಇದರಿಂದ ಅವರು ತಮ್ಮ ಶಕ್ತಿಯನ್ನು ಮರಳಿ ಪಡೆಯುತ್ತಾರೆ. ಆದ್ದರಿಂದ ಹಿಂತಿರುಗಿ ಮದೀನಾ ಮೇಲೆ ದಾಳಿ ಮಾಡಲು ಮತ್ತು ಮುಸ್ಲಿಮರನ್ನು ಹತ್ತಿಕ್ಕಲು ಇನ್ನೂ ಅವಕಾಶವಿದೆ. ಅವರಲ್ಲಿ ಒಂದು ಗುಂಪು "ಆಗಿರುವುದೆಲ್ಲ ಒಳ್ಳೆಯದಾಯಿತು ಎಂದು ಮೆಕ್ಕಾಗೆ ಹಿಂತಿರುಗುವುದು ಉತ್ತಮ" ಎಂದು ಹೇಳುತ್ತಿದ್ದರು. ಈ ಸಣ್ಣ ಯುದ್ಧವನ್ನು ಗೆಲ್ಲುವ ಮೂಲಕ ಗಳಿಸಿದ ಖ್ಯಾತಿಯು ಕಳೆದುಹೋಗದಂತಾಗುವುದು ಮತ್ತು ಈ ಗೆಲುವು ಸೋಲಿನಂತೆ ಬದಲಾಗದಂತೆ, ಆದರೆ ಕೊನೆಯಲ್ಲಿ ಆವೇಶಭರಿತರಾದ ಜನರ ಪ್ರೇರಣೆ ಮೇರೆಗೆ ಖುರೈಶಿಗಳ ಸೈನ್ಯ ಮದೀನದ ಕಡೆಗೆ ಮರಳಿಹೋಗಲು ತಯಾರಾದರು. ಈ ಘಟನೆಗಳ ಬಗ್ಗೆ ಪ್ರವಾದಿ(ಸ) ಅವರಿಗೆ ತಿಳಿಸಿದಾಗ, "ಉಹದ್ ಯುದ್ಧದಲ್ಲಿ ಭಾಗವಹಿಸಿದ್ದ ಮುಸ್ಲಿಮರು ತಯಾರಾಗಿರಿ" ಎಂದು ಹಝ್ರತ್ ಪೈಗಂಬರ್(ಸ) ತಕ್ಷಣವೇ ಘೋಷಿಸಿದರು. (ಮುಜಮುಲ್–ಬಾಲ್ದಾನ್, ಸಂಪುಟ–2, ಪುಟ–346 ಹಮ್ರಾ ಅಲ್–ಅಸ್ಸಾದ್ – ದಾರ್ ಅಲ್–ಕಿತಾಬ್ ಅಲ್–ಅಲಾಮಿಯಾ ಬೈರುತ್) (ಸೀರತ್ ಖಾತಮನ್ನಬಿಈನ್ ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ ಪುಟ–504–505)

ಇನ್ನೊಂದು ವರದಿ ಹೀಗಿದೆ: ಪ್ರವಾದಿ(ಸ) ಅವರನ್ನು ಖುರೈಶರ ಸೈನ್ಯ ಮದೀನಕ್ಕೆ ಮರಳಿಹೋಗಲು ತಯಾರಾಗಿದ್ದಾರೆ ಎಂಬ ಸುದ್ದಿ ತಲುಪಿದಾಗ ಅವರು ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್‌ರನ್ನು(ರ) ಸಮಾಲೋಚನೆಗಾಗಿ ಕರೆದರು. ಖುರೈಶಿಗಳ ಸೈನ್ಯವನ್ನು ಹಿಂಬಾಲಿಸಲು ಇಬ್ಬರೂ ಸಲಹೆ ನೀಡಿದರು. (ಕಿತಾಬುಲ್ ಮಗಾಝಿ ಲಿಲ್‌ವಾಖಿದ್, ಸಂಪುಟ–1, ಪುಟ–278)

ಹೀಗೆ ಉಹದ್ ಯುದ್ಧದ ಗಾಯಾಳುವಾದ ಯೋಧರು ಸಂತೋಷದಿಂದ ಹಝ್ರತ್ ಪೈಗಂಬರರ(ಸ) ನೇತೃತ್ವದಲ್ಲಿ ರವಾನೆಯಾದರು. 8 ಮೈಲುಗಳ ದೂರವನ್ನು ದಾಟುತ್ತಾ ಹಝ್ರತ್ ಪೈಗಂಬರ್(ಸ) ಹಮ್‌ರಾಉಲ್ ಅಸದ್ ತಲುಪಿದರು ಮತ್ತು ಬೇರೆ ಬೇರೆ ಜಾಗಗಳಲ್ಲಿ ಬೆಂಕಿ ಹೊತ್ತಿಸಲು ಆದೇಶಿಸಿದರು. ರಾತ್ರಿಯ ಕತ್ತಲಲ್ಲಿ ಬೆಳಗುತ್ತಿದ್ದ ಐನ್ನೂರು ಬೆಂಕಿಯ ಜ್ವಾಲೆಗಳನ್ನು ದೂರದಿಂದ ನೋಡುವವರ ಹೃದಯುಗಳಲ್ಲಿ ಭಯ ಉಂಟಾಗುತ್ತಿತ್ತು. ಇದೇ ಸಂದರ್ಭದಲ್ಲಿ ಖುಝಾಅದ ಮಅ್‌ಬದ್ ಎಂಬ ಹೆಸರಿನ ಮುಶ್ರಿಕನಾದ ಸರದಾರ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು ಮತ್ತು ಉಹದ್ ಯುದ್ಧದಲ್ಲಿ ಹುತಾತ್ಮರಾದವರ ಕುರಿತು ಸಂತಾಪ ಸೂಚಿಸಿದರು. ಮರುದಿನ ಅವರು ಅಬೂಸುಫ್‌ಯಾನ್‌ರನ್ನು ಭೇಟಿಯಾಗಿ ಅವರಿಗೆ ಮುಸ್ಲಿಮರ ಉನ್ನತ ಮಟ್ಟದ ಧೈರ್ಯದ ಮತ್ತು ಹುಮ್ಮಸ್ಸಿನ ಬಗ್ಗೆ ತಿಳಿಸಿಕೊಟ್ಟರು. ಮಅ್‌ಬದ್‌ನ ಮಾತುಗಳಿಂದ ಅಬೂಸುಫ್‌ಯಾನ್ ಮತ್ತು ಇತರ ಖುರೈಶಿಗಳು ಎಷ್ಟು ಹೆದರಿದರು ಎಂದರೆ, ಅವರು ಮಕ್ಕಕ್ಕೆ ಮರಳಿ ಹೋಗುವುದೇ ಕ್ಷೇಮವೆಂದು ಭಾವಿಸಿದರು. ಖುರೈಶಿಗಳ ಸೈನ್ಯ ಪರಾರಿಯಾದ ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ಸುದ್ದಿ ತಲುಪಿದಾಗ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಎರಡು ಮೂರು ದಿನಗಳು ಅಲ್ಲೇ ತಂಗಿದರು.
(ಸೀರತ್ ಖಾತಮನ್ನಬಿಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–504–505)

ಬನೂ ಮುಸ್ತಲಖ್ ಯುದ್ಧ ಹಿಜರೀ 5ನೇ ವರ್ಷದ ಶೂಬಾನ್ ತಿಂಗಳಲ್ಲಿ ನಡೆಯಿತು. ಇದರ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಖುರೈಶಿಗಳ ವಿರೋಧ ದಿನ ಕಳೆದಂತೆ

ಹೆಚ್ಚು ಅಪಾಯಕಾರಿಯಾಗುತ್ತಾ ಹೋಗುತ್ತಿತ್ತು. ಅವರು ತಮ್ಮ ಪಿತೂರಿಯ ಮೂಲಕ ಅನೇಕ ಗೋತ್ರಗಳನ್ನು ಇಸ್ಲಾಂ ಮತ್ತು ಇಸ್ಲಾಮಿನ ಸ್ಥಾಪಕರ ವಿರುದ್ಧ ಎಬ್ಬಿಸಿ ನಿಲ್ಲಿಸಿದ್ದರು. ಆದರೆ ಅವರ ಈ ವಿರೋಧ ಈಗ ಒಂದು ಹೊಸದಾದ ಅಪಾಯವನ್ನು ಉಂಟುಮಾಡಿತ್ತು. ಅದೇನೆಂದರೆ, ಹಿಜಾಝಿನ ಗೋತ್ರಗಳು ಮುಸ್ಲಿಮರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದರು. ಈಗ ಅವುಗಳು ಕೂಡ ಖುರೈಶಿಗಳ ಪಿತೂರಿಯ ಕಾರಣದಿಂದ ಮುಸ್ಲಿಮರ ವಿರುದ್ಧ ಎದ್ದು ನಿಲ್ಲಲು ಶುರುವಾಗಿತ್ತು. ಈ ಕಾರ್ಯದಲ್ಲಿ ಮೊತ್ತಮೊದಲು ಪ್ರಸಿದ್ಧವಾದ ಖುಝಾಅ ಗೋತ್ರದ ಶಾಖೆಯಾದ ಬನೂ ಮುಸ್ತಲಖ್ ಮದೀನದ ಮೇಲೆ ಆಕ್ರಮಣ ನಡೆಸಲು ತಯಾರಿ ಶುರುಮಾಡಿದರು. ಈ ಗೋತ್ರದ ಸರದಾರನಾದ ಹಾರಿಸ್ ಬಿನ್ ಝಿರಾರ್ ಎಂಬವನು ಈ ಪ್ರದೇಶದ ಇತರ ಗೋತ್ರಗಳಿಗೆ ಹೋಗಿ ಕೆಲವು ಗೋತ್ರಗಳನ್ನು ತಮ್ಮೊಡನೆ ಸೇರಿಸಿದರು. ಈ ವಾರ್ತೆ ಲಭಿಸಿದಾಗ, ಹಝ್ರತ್ ಪೈಗಂಬರ್(ಸ) ಹೆಚ್ಚಿನ ಮುನ್ನೆಚ್ಚರಿಕಾ ಕ್ರಮವೆಂಬಂತೆ ಒಬ್ಬ ಸಹಾಬಿಯಾದ ಬರೀದ ಬಿನ್ ಹಸೀಬ್ ಎಂಬವರನ್ನು ಸ್ಥಿತಿಗತಿಗಳ ಬಗ್ಗೆ ಅರಿಯಲು ಬನೂ ಮುಸ್ತಲಖ್ ಕಡೆಗೆ ರವಾನೆ ಮಾಡಿದರು. ಬಹಳ ದೊಡ್ಡದಾದ ಒಂದು ಗುಂಪು ಅತ್ಯಂತ ಶಕ್ತವಾದ ರೀತಿಯಲ್ಲಿ ಮದೀನದ ಮೇಲೆ ಆಕ್ರಮಣ ನಡೆಸಲು ತಯಾರು ಮಾಡುತ್ತಿರುವುದನ್ನು ಬರೀದ ಕಂಡರು. ಅವರು ಬೇಗನೇ ಮರಳಿಬಂದು ಹಝ್ರತ್ ಪೈಗಂಬರ್‌ರಿಗೆ(ಸ) ಅದರ ಸುದ್ದಿ ಮುಟ್ಟಿಸಿದರು. ಹೀಗೆ ಸೈನ್ಯವನ್ನು ತಯಾರುಮಾಡಲು ಹಝ್ರತ್ ಪೈಗಂಬರ್(ಸ) ಆಜ್ಞಾಪಿಸಿದರು. ಹೀಗೆ ಹಲವಾರು ಸಹಾಬರು ಮತ್ತು ಹಿರಿಯ ಸಂಖ್ಯೆಯಲ್ಲಿ ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರರೊಡನೆ(ಸ) ಸೇರಿದರು. ಹಝ್ರತ್ ಅಬೂಧರ್ ಗ್ಫಾರಿ(ರ) ಅಥವಾ ಕೆಲವು ವರದಿಗಳ ಪ್ರಕಾರ ಝೈದ್ ಬಿನ್ ಹಾರಿಸರನ್ನು ಮದೀನದ ಅಮೀರನ್ನಾಗಿ ಮಾಡಿಕೊಂಡು ಹಝ್ರತ್ ಪೈಗಂಬರ್(ಸ) ಅಲ್ಲಾಹನ ಹೆಸರು ಉಚ್ಚರಿಸುತ್ತಾ ಶಾಬಾನ್ ಹಿಜರೀ ಐದರಂದು ಮದೀನದಿಂದ ಹೊರಟರು. ಸೈನ್ಯದಲ್ಲಿ ಕೇವಲ ಮೂವತ್ತು ಕುದುರೆಗಳಿದ್ದುವು. ಒಂಟೆಗಳು ಸ್ವಲ್ಪ ಹೆಚ್ಚಿದ್ದುವು. ಅದೇ ಕುದುರೆಗಳು ಮತ್ತು ಒಂಟೆಗಳೊಂದಿಗೆ ಮುಸ್ಲಿಮರೆಲ್ಲರೂ ಸರದಿ ಪ್ರಕಾರ ಸವಾರರಾಗುತ್ತಿದ್ದರು. ಮಾರ್ಗ ಮಧ್ಯೆ ಮುಸ್ಲಿಮರಿಗೆ ಸತ್ಯನಿಷೇಧಿಗಳ ಒಬ್ಬ ಗುಪ್ತಚರನ ಪತ್ತೆಯಾಯಿತು. ಅವನನ್ನು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರುಪಡಿಸಲಾಯಿತು. ಅವನಿಂದ ಸ್ಥಿತಿಗತಿಗಳ ಬಗ್ಗೆ ಗೊತ್ತುಮಾಡಲು ಪ್ರಯತ್ನಿಸಲಾಯಿತು. ಆದರೆ ಅವನು ಹೇಳುವುದನ್ನು ನಿರಾಕರಿಸಿದನು. ಅವನ ವರ್ತನೆ ಸಂಶಯಾಸ್ಪದವಾಗಿತ್ತು. ಆದ್ದರಿಂದ ಆಗ ಜಾರಿಯಲ್ಲಿದ್ದ ಯುದ್ಧದ ಕಾನೂನು ಪ್ರಕಾರ ಹಝ್ರತ್ ಉಮರ್(ರ) ಅವರನ್ನು ಕೊಂದುಹಾಕಿದರು. ಅದರ ನಂತರ ಇಸ್ಲಾಮಿನ ಸೈನ್ಯ ಮುಂದಕ್ಕೆ ರವಾನೆಯಾಯಿತು. ಮುಸ್ಲಿಮರು ಬರುತ್ತಿರುವ ಮತ್ತು ಅವರ ಗುಪ್ತಚರ ಕೊಲ್ಲಲ್ಪಟ್ಟ ಸುದ್ದಿ ಅವರಿಗೆ ತಲುಪಿದಾಗ ಅವರು ಬಹಳ ಭಯಗೊಂಡರು. ಏಕೆಂದರೆ ಮದೀನದ ಮೇಲೆ ಅಚಾನಕ್ಕಾದ ಹಲ್ಲೆ ನಡೆಸಲು ಬನೂ ಮುಸ್ತಲಖ್ ಉದ್ದೇಶಿಸಿತ್ತು. ಆದರೆ ಹಝ್ರತ್ ಪೈಗಂಬರರ(ಸ) ಜಾಗರೂಕತೆಯ ಕಾರಣದಿಂದ ಶತ್ರುಗಳಿಗೆ ಲಾಭದ ಬದಲಾಗಿ ನಷ್ಟವುಂಟಾಯಿತು. ಬನೂ ಮುಸ್ತಲಖ್ ಗೋತ್ರದೊಂದಿಗೆ ಸೇರಿದ್ದ ಇತರ ಗೋತ್ರಗಳು ಈ ಘಟನೆಯಿಂದ ಭಯಗೊಂಡು ಅವರನ್ನು ಬಿಟ್ಟು ತಮ್ಮ ತಮ್ಮ ಮನೆಗೆ ಹೋದರು. ಆದರೆ ಖುರೈಶಿಗಳು ಬನೂ ಮುಸ್ತಲಖಿನ ಜನರ ಹೃದಯಗಳಲ್ಲಿ ಮುಸ್ಲಿಮರ ಬಗ್ಗೆ ಬಹಳ ತೀವ್ರವಾಗಿ ಹಗೆಯನ್ನು ಹುಟ್ಟಿಸಿದ್ದ ಕಾರಣದಿಂದ ಅವರು ಯುದ್ಧದಿಂದ ಹಿಂದೆಸರಿಯಲಿಲ್ಲ. ಯುದ್ಧ ಶುರುವಾದಾಗ, ಹಝ್ರತ್ ಪೈಗಂಬರರ(ಸ) ಉತ್ತಮ ಕಾರ್ಯವೈಖರಿಯ ಪರಿಣಾಮವಾಗಿ ಬನೂ ಮುಸ್ತಲಖ್‌ರನ್ನು ಸುತ್ತುವರೆಯಲಾಯಿತು. ಅವರು ಆಯುಧಗಳನ್ನು ಕೆಳಗೆ ಹಾಕಲು ನಿರ್ಬಂಧಿತರಾದರು. ಈ ಯುದ್ಧದಲ್ಲಿ ಒಬ್ಬ ಮುಸ್ಲಿಮ್ ಮತ್ತು ಹತ್ತು ಮಂದಿ ಸತ್ಯನಿಷೇಧಿಗಳು ಕೊಲ್ಲಲ್ಪಟ್ಟರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮನ್ನಬಿಈನ್‌ನಲ್ಲಿ ಬರೆಯುತ್ತಾರೆ: ಈ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸುವುದು ಅವಶ್ಯಕವಾಗಿದೆ. ಈ ಯುದ್ಧದ ಬಗ್ಗೆ ಸಹೀಹ್ ಬುಖಾರಿನಲ್ಲಿ ಒಂದು ವರದಿ ಹೀಗಿದೆ ಪ್ರವಾದಿ ಮುಹಮ್ಮದ್(ಸ)ರವರು ಬನೂ ಮುಸ್ತಲಖ್‌ನ ಮೇಲೆ ಎಂತಹ ಸಂದರ್ಭದಲ್ಲಿ ಹಲ್ಲೆ ನಡೆಸಿದರು ಎಂದರೆ ಅವರು ಅಜಾಗೃಕತೆಯಲ್ಲಿ ತಮ್ಮ ಪ್ರಾಣಿಗಳನ್ನು ನೀರುಣಿಸುತ್ತಿದ್ದರು ಆದರೆ ಗಾಂಭೀರ್ಯದಿಂದ ನೋಡಿದರೆ ಈ ವರದಿಯು ಇತಿಹಾಸಗಾರರ ವರದಿಗಳ ವಿರುದ್ಧ ಇಲ್ಲ ಅದರ ಬದಲು ಈ ಎರಡು ವರದಿಗಳು ಬೇರೆ ಬೇರೆ ಸಂದರ್ಭದ ವರದಿಗಳಾಗಿದ್ದಾವೆ ಎಂದು ತಿಳಿದು ಬರುತ್ತದೆ ಅಂದರೆ ಘಟನೆಯು ಹೀಗಿದೆ ಇಸ್ಲಾಮಿ ಸೈನ್ಯವು ಬನೂ ಮುಸ್ತಲಖ್‌ನ ಸಮೀಪಕ್ಕೆ ತಲುಪಿದಾಗ ಆ ಸಂದರ್ಭದಲ್ಲಿ ಅವರಿಗೆ ಮುಸ್ಲಿಮರು ಸಮೀಪಕ್ಕೆ ತಲುಪಿದ್ದಾರೆ ಎಂಬುದು ಅವರಿಗೆ ಗೊತ್ತಿರಲಿಲ್ಲ(ಆದರೆ ಅವರಿಗೆ ಮುಸ್ಲಿಮರ ಆಗಮನದ ಬಗ್ಗೆ ಅರಿವಿತ್ತು) ಅವರು ಸಾಮಾಧಾನವಾಗಿ ತಮ್ಮ ದಿನನಿತ್ಯದ ಕಾರ್ಯಗಳಲ್ಲಿ ತೊಡಗಿದ್ದರು. ಈ ಪರಿಸ್ಥಿತಿಯ ಬಗ್ಗೆ ಬುಖಾರಿನಲ್ಲಿ ಪ್ರಸ್ತಾಪವಿದೆ ಆದರೆ ಅವರಿಗೆ ಮುಸ್ಲಿಮರ ಆಗಮನದ ಬಗ್ಗೆ ತಿಳಿದಾಗ ಅವರು ತಕ್ಷಣವೇ ತಮ್ಮ ಮುಂಚೆಯ ಸಿದ್ಧತೆಗಳ ಪ್ರಕಾರವೇ ಸಿದ್ಧರಾದರು. ಈ ಪರಿಸ್ಥಿತಿಯನ್ನು ಇತಿಹಾಸಗಾರರು ಪ್ರಸ್ತಾಪಿಸಿರುವುದು ಮತ್ತು ಈ ಭಿನ್ನಭಿಪ್ರಾಯಗಳ ವ್ಯಾಖ್ಯಾನವನ್ನು ಅಲ್ಲಾಮ ಇಬ್ನು ಹಜರ್ ಅಸ್ಕಲಾನಿ ಮತ್ತು ಅನ್ಯ ಸಂಶೋಧಕರು ನೀಡಿದ್ದಾರೆ. ಇದು ಸರಿಯಾಗಿದೆ ಎಂದು ತಿಳಿದು ಬರುತ್ತದೆ. (ಸೀರತ್ ಖಾತಮನ್ನಬಿಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–557–559)

ಬನೂ ಮುಸ್ತಲಖ್ ಯುದ್ಧದಿಂದ ಹಿಂದಿರುಗುವಾಗ ಇನ್ನೊಂದು ಘಟನೆಯು ಸಂಭವಿಸಿತು. ಸಹೀಹ್ ಮುಸ್ಲಿಮ್‌ನಲ್ಲಿ ಈ ವರದಿ ಇದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲ ವರದಿ ಮಾಡುತ್ತಾರೆ ನಾವು ಪ್ರವಾದಿ(ಸ) ಅವರೊಂದಿಗೆ ಒಂದು ಯುದ್ಧದಲ್ಲಿ ಅಂದರೆ ಬನೂ ಮುಸ್ತಲಖ್ ಯುದ್ಧದಲ್ಲಿ ಭಾಗವಹಿಸಿದ್ದೆವು ಮುಹಾಜಿರ್‌ಗಳಲ್ಲಿ ಒಬ್ಬ ವ್ಯಕ್ತಿ ಒಬ್ಬ ಅನ್ಸಾರಿಯ ಬೆನ್ನಿಗೆ ಹೊಡೆದರು. ಆಗ ಇಬ್ಬರೂ ವ್ಯಕ್ತಿಗಳು ತಮ್ಮ ತಮ್ಮ ಗುಂಪಿನವರನ್ನು ಸಹಾಯಕ್ಕಾಗಿ ಕರೆದರು. ಹಝ್ರತ್ ಪೈಗಂಬರರಿಗೆ(ಸ) ಈ ಸುದ್ದಿ ತಲುಪಿದಾಗ ಹಝ್ರತ್ ಪೈಗಂಬರ್(ಸ) ಅದನ್ನು ವ್ಯರ್ಥ ಮತ್ತು ಕೊಳಕು ಸಂಗತಿಯೆಂದು ಹೇಳಿಕೊಂಡು ಸಮಸ್ಯೆಯನ್ನು ಕೊನೆಗೊಳಿಸಿದರು. ಆದರೆ ಅಬ್ದುಲ್ಲಾಹ್ ಬಿನ್ ಅಬೀ ಹೇಳಿದನು: "ಮುಹಾಜಿರನಾದ ವ್ಯಕ್ತಿ ಅನ್ಸಾರ್‌ನವರ ಒಬ್ಬ ವ್ಯಕ್ತಿಯನ್ನು ಹೊಡೆದನು. ಆದ್ದರಿಂದ ನಾವು ಮದೀನಕ್ಕೆ ತಲುಪಿದ ನಂತರ ಗೌರವಾನ್ವಿತನಾದ ವ್ಯಕ್ತಿ ನಿಂದ್ಯನಾದ (ನಊಧುಬಿಲ್ಲಾಹ್) ವ್ಯಕ್ತಿಯನ್ನು ಅಲ್ಲಿಂದ ಹೊರಕೆ ಹಾಕುವನು." ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್! ನನಗೆ ಈ ಕಪಟವಿಶ್ವಾಸಿಯನ್ನು ಕೊಲ್ಲಲು ಅನುಮತಿ ನೀಡಿರಿ. ಆದಾಗ್ಯೂ ಹಝ್ರತ್ ಪೈಗಂಬರ್(ಸ) ಅನುಮತಿ ಕೊಡಲಿಲ್ಲ. (ಸಹೀಹ್ ಮುಸ್ಲಿಮ್ ಕಿತಾಬುಲ್ ಬಿರ್, ಹದೀಸ್–6583)

ಈ ಘಟನೆಯ ವಿವರಗಳನ್ನು ಸಿರತ್ ಖಾತಮನ್ನಬಿಈನ್‌ನಲ್ಲಿ ನೀಡಲಾಗಿದೆ, ಅದನ್ನು ನಾನು ಬಿಡುತ್ತೇನೆ. ನಾನು ಇದನ್ನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಆದಾಗ್ಯೂ, ಅಬ್ದುಲ್ಲಾ ಬಿನ್ ಅಬೀಯ ಕೊನೆಯ ದಿನಗಳನ್ನು ಉಲ್ಲೇಖಿಸಿ, ಇಬ್ನ್ ಹಿಶ್ಶಾಮ್ ಅವರ ಜೀವನಚರಿತ್ರೆಯಲ್ಲಿ ಹೀಗೆ ಬರೆಯಲಾಗಿದೆ, ಅದರ ನಂತರ ಅಬ್ದುಲ್ಲಾ ಬಿನ್ ಅಬೀ ಅಂತಹ ಯಾವುದಾದರು ವಿಳಯವನ್ನು ಹೇಳಿದಾಗ, ಆತನ ಜನರು ಆತನನ್ನು ಬಹಳ ಸೋಮಾರಿಯೆಂದು ಕರೆಯುತ್ತಿದ್ದರು. ಪ್ರವಾದಿ(ಸ) ಅವರನ್ನು ಆತನ ಸ್ಥಿತಿಯ ಬಗ್ಗೆ ತಿಳಿದಾಗ, ಪ್ರವಾದಿ(ಸ)ರವರು ಹಝ್ರತ್ ಉವರ್ ಬಿನ್ ಖತ್ತಾಬ್ ಅವರನ್ನು ಹೇಳಿದರು: ಓ ಉಮರ್! ಆತನನ್ನು(ಅಬ್ದುಲ್ಲಾ ಬಿನ್ ಅಬೀ)ರವರನ್ನು ಕೊಲ್ಲಲು ನೀವು ನನ್ನನ್ನು ಅನುಮತಿ ಕೇಳಿದಾಗ, ನಾನು ಅಬ್ದುಲ್ಲಾಹ್ ಬಿನ್ ಅಬೀಯನ್ನು ಕೊಲ್ಲಿಸಿದ್ದರೆ, ಜನರು ಆಕ್ಷೇಪವೆತ್ತುತ್ತಿದ್ದರು. ಆದರೆ ಈಗ ಅವನ ಜನರಲ್ಲೇ ಯಾರೊಡನೆಯಾದರೂ ಅವನನ್ನು ಕೊಲ್ಲಲು ನಾನು ಆಜ್ಞಾಪಿಸಿದರೆ, ಅವರು ಅವನನ್ನು ಕೊಲ್ಲುವರು. ನೋಡಿ, ತಾಳ್ಮೆ ಮತ್ತು ಸಂದರ್ಭಗಳಿಂದಾಗಿ, ಆತನ ಬೆಂಬಲಿಗರು ಇಂದು ಆತನ ವಿರುದ್ಧ ತಿರುಗಿದ್ದಾರೆ ಮತ್ತು ಅವರು ಆತನನ್ನು ಕೊಲ್ಲಬಹುದು. ಹಝ್ರತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನ ಆಣೆ! ಅಲ್ಲಾಹನ ಸಂದೇಶವಾಹಕ(ಸ)ರವರ ಮಾತುಗಳು ಅನುಗ್ರಹದ ವಿಳಯದಲ್ಲಿ ನನ್ನ ಮಾತುಗಳಿಗಿಂತ ಖಂಡಿತವಾಗಿಯೂ ದೊಡ್ಡದಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. (ಸೀರತ್ ಇಬ್ನ್ ಹಿಶಮ್, ಪುಟ–672, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಕಪಟವಿಶ್ವಾಸಿಗಳ ನೇತಾರನಾದ ಅಬ್ದುಲ್ಲಾಹ್ ಬಿನ್ ಅಬೀಯ ಜನಾಝುವನ್ನು ನಿರ್ವಹಿಸಲು ಹಝ್ರತ್ ಪೈಗಂಬರ್(ಸ) ತಯಾರಾದಾಗ, ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್‌ರೊಡನೆ(ಸ) ಹೇಳಿದರು: ಕಪಟವಿಶ್ವಾಸಿಗಳ ಜನಾಝು ನಮಾಝನ್ನು ನಿರ್ವಹಿಸುವುದರಿಂದ ಅಲ್ಲಾಹನು ನಿಮ್ಮನ್ನು ತಡೆದಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಪಶ್ಚಾತ್ತಾಪಕ್ಕಾಗಿ ಪ್ರಾರ್ಥಿಸಲು ಅಥವಾ ಪ್ರಾರ್ಥಿಸದಿರಲು ಅಲ್ಲಾಹನು ನನಗೆ ಅನುಮತಿ ನೀಡಿದ್ದಾನೆ. ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಅವನ ಜನಾಝು ನಮಾಝನ್ನು ನಿರ್ವಹಿಸಿದರು. ಆದರೆ ಅನಂತರ ಅಲ್ಲಾಹನು ಹಝ್ರತ್ ಪೈಗಂಬರರನ್ನು(ಸ) ಪೂರ್ಣವಾಗಿ ತಡೆದಾಗ, ಕಪಟವಿಶ್ವಾಸಿಗಳ ಜನಾಝು ನಮಾಝ್ ನಿರ್ವಹಿಸುವುದನ್ನು ಹಝ್ರತ್ ಪೈಗಂಬರ್(ಸ) ಉಪೇಕ್ಷಿಸಿದರು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ–3, ಪುಟ–941, ದಆರುಲ್ ಜೀಲ್ ಬೈರೂತ್)

ಅಬೂ ಸಲ್ಮರವರು ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ರವರಿಂದ ವರದಿ ಮಾಡುತ್ತಾರೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಖಂದಖ್ ಯುದ್ಧದ ದಿನದಂದು ಸೂರ್ಯಾಸ್ತದ ನಂತರ ಬಂದು ಮಕ್ಕದ ನಾಸ್ತಿಕ ಖುರೈಳರನ್ನು ಶಪಿಸಲು ಪ್ರಾರಂಭಿಸಿದರು. ಮತ್ತೆ ಅವರು ಹೇಳಿದರು: ಯಾರಸೂಲಲ್ಲಾಹ್! ಸೂರ್ಯ ಮುಳುಗುವವರೆಗೂ ನನಗೆ ಅಸ್ರ್ ನಮಾಝ್

ಸಿಗಲಿಲ್ಲ. ಪ್ರವಾದಿ(ಸ) ಹೇಳಿದರು: ಅಲ್ಲಾಹನ ಆಣೆ! ನಾನು ಸಹ ಅಸರ್ ನಮಾಝ್ ನಿರ್ವಹಿಸಲಿಲ್ಲ. ಈ ಸಮಯದಲ್ಲಿ ನಾವು ಎದ್ದು ಬುತ್‌ಹಾನ್‌ಗೆ ಹೋದೆವು. ಬುತ್‌ಹಾನ್ ಕೂಡ ಮದೀನಾದ ಕಣಿವೆಗಳಲ್ಲಿ ಒಂದಾಗಿದೆ ಮತ್ತು ಪ್ರವಾದಿ(ಸ) ನಮಾಝ್‌ಗಾಗಿ ವಝು ಮಾಡಿದರು ಮತ್ತು ನಾವು ಸಹ ವಝು ಮಾಡಿ ಸೂರ್ಯಾಸ್ತದ ನಂತರ ಅಸ್ರ್ ನಮಾಝುನ್ನು ನಿರ್ವಹಿಸಿದೆವು. ನಂತರ ಅವರು ಮಗ್ರಿಬ್ ಪ್ರಾರ್ಥನೆ ನಿರ್ವಹಿಸಿದರು. ಇದು ಬುಖಾರಿ ಸಂಪ್ರದಾಯ. (ಸಾಹಿಹ್ ಅಲ್-ಬುಖಾರಿ, ಕಿತಾಬ್ ಮವಾಖಿಯತುಸ್ಸಲಾತ್, ಹದೀಸ್-596) (ಮುಜಮ್ಮುಲ್ ಬಲದಾನ್, ಸಂಪುಟ-1, ಪುಟ-529, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಖಂದಖ್ ಯುದ್ಧದ ಸಮಯದಲ್ಲಿ ಪ್ರವಾದಿ(ಸ) ಮತ್ತು ಅವರ ಸಹಾಬರವರು ಎಷ್ಟು ನಮಾಝ್‌ಗಳು ನಿರ್ವಹಿಸಲು ಸಾಧ್ಯವಾಗಲಿಲ್ಲ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ವಿವಿಧ ವರದಿಗಳಿವೆ. ಒಂದು ವರದಿ ಹೀಗಿದೆ ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ ಹಝ್ರತ್ ಉಮರ್(ರ)ರವರು ಖಂದಖ್ ಯುದ್ಧದಂದು ಈ ನಾಸ್ತಿಕರನ್ನು ಶಪಿಸಲು ಪ್ರಾರಂಭಿಸಿದರು ಮತ್ತು ಸೂರ್ಯ ಮುಳುಗುವ ತನಕ ತನಗೆ ಅಸ್ರ್ ನಮಾಝ್ ಸಿಗಲಿಲ್ಲ ಎಂದು ಹೇಳೂತ್ತಿದ್ದರು. ನಾವು ಬುತ್‌ಹಾನ್‌ಗೆ ಇಳಿದು ಸೂರ್ಯಾಸ್ತದ ನಂತರ ನಮಾಝ್ ನಿರ್ವಹಿಸಿದೆವು. ತದನಂತರ ಅವರು ಮಗ್ರಿಬ್ ನಮಾಝ್ ನಿರ್ವಹಿಸಿದರು. ಇದು ಬುಖಾರಿಯಲ್ಲಿನ ಒಂದು ವರದಿಯಾಗಿದೆ. ಅಂದರೆ, ಮೊದಲನೆಯದು ಪ್ರವಾದಿ(ಸ) ಅವರೊಂದಿಗೆ ಇದ್ದರು. (ಸಾಹಿಹ್ ಬುಖಾರಿ, ಮವಾಖಿಯತುಸ್ಸಲಾತ್, ಹದೀಸ್-598)

ಮತ್ತೆ ಹಝ್ರತ್ ಅಲಿ(ರ) ಅವರು ಹೇಳುತ್ತಾರೆ ಪ್ರವಾದಿ(ಸ)ರವರು ಖಂದಖ್ ಸಂದರ್ಭದಲ್ಲಿ ಹೇಳಿದರು: ಅಲ್ಲಾಹನು ಈ ನಾಸ್ತಿಕರಿಗೆ ಅವರ ಮನೆಗಳನ್ನು ಮತ್ತು ಸಮಾಧಿಗಳನ್ನು ಬೆಂಕಿಯಿಂದ ತುಂಬಿಸಲಿ. ಅವರು ನಮ್ಮನ್ನು ಕಾರ್ಯನಿರತವಾಗಿರಿಸಿದ್ದರು ಮತ್ತು ಸೂರ್ಯ ಮುಳುಗುವವರೆಗೂ ಮಧ್ಯದ ನಮಾಝುನ್ನು ನಿರ್ವಹಿಸಲು ನಮಗೆ ಅವಕಾಶ ನೀಡಲಿಲ್ಲ. (ಸಾಹಿಹ್ ಬುಖಾರಿ, ಕಿತಾಬ್ ಅಲ್-ಮಾಗಾಝಿ, ಹದೀಸ್-4111) ಹಝ್ರತ್ ಅಲಿ(ರ)ರವರ ಈ ವರದಿಯು ಬುಖಾರಿಯಲ್ಲಿದೆ.

ಮತ್ತೆ ಅಬೂ ಉಬೈದಾ ಬಿನ್ ಅಬ್ದುಲ್ಲಾ ತನ್ನ ತಂದೆಯಿಂದ ಖಂದಖ್ ದಿನದಂದು, ಬಹುದೇವತಾವಾದಿಗಳು ಪ್ರವಾದಿ(ಸ) ನಾಲ್ಕು ನಮಾಝ್‌ಗಳನ್ನು ನಿರ್ವಹಿಸಲು ತಡೆದರು ಮತ್ತು ಅಲ್ಲಾಹನು ಬಯುಸಿದಷ್ಟು ರಾತ್ರಿ ಹಾದುಹೋಗುವವರೆಗೆ ತಡೆದರು. ವರದಿಗಾರರು ಹೇಳುತ್ತಾರೆ ಪ್ರವಾದಿ(ಸ) ಅವರು ಹಝ್ರತ್ ಬಿಲಾಲ್(ರ)ಗೆ ಸೂಚನೆ ನೀಡಿದಾಗ, ಅವರು ಅಝಾನ್ ನೀಡಿದರು. ತದನಂತರ ಪ್ರವಾದಿ(ಸ) ಅವರು ಇಖಾಮತ್ ಹೇಳಲು ಸೂಚನೆ ನೀಡಿದರು ಮತ್ತು ಝುಹರ್ ನಮಾಝ್ ಸಲ್ಲಿಸಿದರು. ತದನಂತರ ಅವರು ಇಖಾಮತ್ ಹೇಳಲು ಆದೇಶಿಸಿದರು ಮತ್ತು ಅಸ್ರ್ ನಮಾಝ್ ನಿರ್ವಹಿಸಿದರು. ತದನಂತರ ಪ್ರವಾದಿ(ಸ) ರವರು ಇಖಾಮತ್ ಹೇಳಲು ಸೂಚನೆ ನೀಡಿದರು ಮತ್ತೆ ಮಗ್ರಿಬ್ ನಮಾಝ್ ನಿರ್ವಹಿಸಿದರು. ತದನಂತರ ಪುನಃ ಪ್ರವಾದಿ(ಸ) ರವರು ಇಖಾಮತ್ ಹೇಳಲು ಸೂಚಿಸಿರು ಮತ್ತೆ ಇಶಾ ನಮಾಝ್ ನಿರ್ವಹಿಸಿದರು. ಇದು ಮುಸ್ನದ್ ಅಹ್ಮದ್ ಬಿನ್ ಹಂಬಲ್ ಅವರ ವರದಿಯಾಗಿದೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-2, ಪುಟ-6-7, ಹದೀಸ್-3555, ಆಲಂ ಅಲ್-ಕಿತಾಬ್ ಬೈರುತ್ 1998)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಈ ಎಲ್ಲಾ ವರದಿಗಳು ರ್ದುಬಲ ಎಂದು ಘೋಷಿಸಿದ್ದಾರೆ ಕೇವಲ ಒಂದು ವರದಿಯನ್ನು ಮಾತ್ರ ಸರಿ ಎಂದು ದೃಢೀಕರಿಸಿದ್ದಾರೆ, ಇದರಲ್ಲಿ ಅಸ್ರ್ ನಮಾಝುನ್ನು ಸಾಮಾನ್ಯಕ್ಕಿಂತ ಕಡಿಮೆ ಸಮಯದಲ್ಲಿ ನಿರ್ವಹಿಸಬೇಕು ಎಂದು ಪ್ರಸ್ತಾಪಿಸಲಾಗಿದೆ. ಆದ್ದರಿಂದ, ಖಂದಖ್ ಯುದ್ಧದಲ್ಲಿ ಪ್ರವಾದಿ(ಸ) ರ ನಾಲ್ಕು ನಮಾಝ್‌ಗಳನ್ನು ನಿರ್ವಹಿಸಲು ಪಾದರಿ ಫತೇಹ್ ಮಾಸಿಹ್ ಅವರ ಆಕ್ಷೇಪಣೆಗೆ ಪ್ರತಿಕ್ರಿಯಿಸಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಹೇಳುತ್ತಾರೆ: ಮೊದಲನೆಯದಾಗಿ, ನಿಮ್ಮ ಜ್ಞಾನವು ಈ ಪದ ಖಝಾ ಅನ್ನು ಬಳಸಲಾಗಿದೆ. ಓ ಅಜ್ಞಾನಿಗಳೇ! 'ಖಝಾ' ಎಂದರೆ ನಮಾಝ್ ನಿರ್ವಹಿಸುವುದು ಎಂದು ಹೇಳುತ್ತಾರೆ. ಬಿಡುವುದು ಎಂದು ಹೇಳುವುದಿಲ್ಲ. ನಮಾಝ್ ಬಿಡುವುದು ಎಂದರೆ 'ಖಝಾ' ಎಂದಲ್ಲ. ಒಬ್ಬ ವ್ಯಕ್ತಿಯ ನಮಾಝ್ ತಪ್ಪಿ ಹೋದರೆ ಅವನ ಹೆಸರು ಮೃತ ಎಂದರ್ಥ. ಅಂದರೆ, ನಮಾಝ್ ಸತ್ತಿದೆ. ಅದಕ್ಕಾಗಿಯೇ ನಾವು ಐದು ಸಾವಿರ ರೂಪಾಯಿಗಳಿಗೆ ಜಾಹೀರಾತು ನೀಡಿದ್ದೆವು, ಇಸ್ಲಾಮ್ ಧರ್ಮವನ್ನು ಕುರಿತು ಆಕ್ಷೇಪಿಸುವಂತಹ ಮೂರ್ಖರು ಕೂಡ 'ಖಝಾ' ದ ಅರ್ಥವನ್ನು ಇನ್ನೂ ತಿಳಿದಿಲ್ಲ. ಯಾರು ಪದಗಳನ್ನು ಅದರ ತಕ್ಕ ಜಾಗದಲ್ಲಿ ಬಳಸಲು ಸಾಮರ್ಥ್ಯ ಹೊಂದಲಿಲ್ಲವೋ ಆ ವ್ಯಕ್ತಿಯು ಅಜ್ಞಾನಿಯಾಗಿದ್ದಾನೆ, ಅವನು ಹೇಗೆ ವಿಷಯಗಳನ್ನು ನಿಖರವಾಗಿ ಟೀಕಿಸುವ ಸಾಮರ್ಥ್ಯ ಹೊಂದಿರಲು ಸಾಧ್ಯ. ಕಂದಕವನ್ನು ಅಗೆಯುವಾಗ ನಾಲ್ಕು ನಮಾಝ್‌ಗಳನ್ನು ಸಲ್ಲಿಸಲಾಯಿತು ಎಂಬ ಈ ಅವಿವೇಕಿ ಪಿಸುಮಾತಿಗೆ ಉತ್ತರವೆಂದರೆ, ಧರ್ಮದಲ್ಲಿ ಯಾವುದೇ ಹಾನಿ ಇಲ್ಲ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಅಂದರೆ, ಮನುಷ್ಯನ ವಿನಾಶಕ್ಕೆ ಕಾರಣವಾಗುವ ಕಷ್ಟಗಳಂತಹ ಯಾವುದೇ ವಿಷಯಗಳಿಲ್ಲ. ಆದ್ದರಿಂದ, ಅಗತ್ಯವಿರುವ ಸಮಯದಲ್ಲಿ ಮತ್ತು ವಿಪತ್ತಿನ ಸಮಯದಲ್ಲಿ ನಮಾಝ್‌ಗಳನ್ನು ಒಗ್ಗೂಡಿಸಿ ಮತ್ತು ಕಡಿಮೆ ಮಾಡಲು ಅಲ್ಲಾಹನು ಆಜ್ಞಾಪಿಸಿದ್ದಾನೆ, ಆದರೆ ಈ ಸ್ಥಳದಲ್ಲಿ ನಮ್ಮ ನಾಲ್ಕು ವಿಶ್ವಾಸಾರ್ಹ ಹದೀಸ್‌ನಲ್ಲಿ ನಾಲ್ಕು ನಮಾಝ್‌ಗಳು ಸೇರಿಸಿ ನಿರ್ವಹಿಸುವ ಬಗ್ಗೆ ಯಾವುದೇ ಉಲ್ಲೇಖವಿಲ್ಲ, ಆದರೆ ಫತೇಹ್ ಅಲ್-ಬರಿ ಶಾರಹ್ ಸಹೀಹ್ ಬುಖಾರಿನಲ್ಲಿ ಒಂದು ನಮಾಝ್, ಅಂದರೆ ಸಲಾತ್-ಉಲ್-ಅಸ್ರ್ ಅನ್ನು ಸಾಮಾನ್ಯಕ್ಕಿಂತ ಕಡಿಮೆ ಸಮಯದಲ್ಲಿ ನಿರ್ವಹಿಸಲಾಯಿತು ಎಂದು ಬರೆಯಲಾಗಿದೆ. ಈ ಸಮಯದಲ್ಲಿ ನೀವು ನಮ್ಮ ಮುಂದೆ ಇರುತ್ತಿದ್ದರೆ, ನಾವು ಕುಳಿತು ನಿಮ್ಮನ್ನು ಕೇಳುತ್ತೇವೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಇದು ಎದುರಾಳಿಯನ್ನು ಉದ್ದೇಶಿಸುತ್ತಾ ಹೇಳುತ್ತಿದ್ದಾರೆ: ನಾಲ್ಕು ನಮಾಝ್‌ಗಳು ತಪ್ಪಿಹೋದದ್ದು ಸರ್ವಾನುಮತದ ವರದಿಗಳೇ? ನಾಲ್ಕು ನಮಾಝ್‌ಗಳು ಶರಿಯತ್ತಿನ ಪ್ರಕಾರ, ಅಂದರೆ ಝುಹರ್ ಹಾಗೂ ಅಸರ್ ಮತ್ತು ಮಗ್ರಿಬ್ ಹಾಗೂ ಇಶಾ ಸಂಯೋಜಿಸಬಹುದು. ಹೌದು, ಝುಹರ್, ಅಸರ್, ಮಗ್ರಿಬ್ ಮತ್ತು ಇಶಾ ಅವರನ್ನು ಒಟ್ಟಿಗೆ ಪಠಿಸಲಾಯಿತು ಎಂಬ ದುರ್ಬಲ ವರದಿ ಇದೆ, ಆದರೆ ಇತರ ಸಾಹೀಹ್ ಹದೀಸ್‌ಗಳು ಇದನ್ನು ನಿರಾಕರಿಸುತ್ತಾರೆ ಮತ್ತು ಅಲ್ಪಾವಧಿಯಲ್ಲಿ ಅಸ್ರ್ ಅನ್ನು ಪಠಿಸಲಾಗಿದೆ ಎಂದು ಅದು ಸಾಬೀತುಪಡಿಸುತ್ತದೆ. (ನೂರ್-ಉಲ್-ಖುರ್‌ನ್, ಸಂಖ್ಯೆ-2, ರೂಹಾನಿ ಖಝಾಈನ್ ಸಂಪುಟ-9, ಪುಟಗಳು-389-390)

ಸುಲಹ್ ಹುದೈಬಿಯಾದ ಒಪ್ಪಂದದಲ್ಲಿ ಹಝ್ರತ್ ಉಮರ್(ರ)ರವರ ಪಾತ್ರದ ಬಗ್ಗೆ ಏನು ಬರೆಯಲಾಗಿದೆ ಎಂದರೆ ಪ್ರವಾದಿ(ಸ)ರವರು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ರನ್ನು ಮೆಕ್ಕಾಗೆ ಕಳುಹಿಸಲು ಮತ್ತು ಖುರೈಶ್‌ನ ವರಿಷ್ಠರಿಗೆ ಪ್ರವಾದಿ(ಸ)ರವರ ಬರುವಿಕೆಯ ಉದ್ದೇಶವೂ ಏನು ಎಂದು ತಿಳಿಸಲು ಕರೆದರು. ಹಝ್ರತ್ ಉಮರ್(ರ) ಹೇಳಿದರು ಯಾ ರಸೂಲಲ್ಲಾಹ್! ಖುರೈಶರಿಂದ ನನ್ನ ಜೀವಕ್ಕೆ ಅಪಾಯವಿದೆ ಏಕೆಂದರೆ ಅವರ ಬಗ್ಗೆ ನನ್ನ ದ್ವೇಷದ ಬಗ್ಗೆ ಅವರಿಗೆ ತಿಳಿದಿದೆ. ನಾನು ಖುರೈಶರಿಗೆ ಎಷ್ಟು ದೊಡ್ಡ ವೈರಿ ಎಂದು ಅವರಿಗೆ ಅರಿವಿದೆ. ನಾನು ಅವರ ಮೇಲೆ ಎಷ್ಟು ಕಠಿಣವಾಗಿದ್ದೇನೆ ಮತ್ತು ನನ್ನ ಖೌಮಾದ ಬನೂ ಅದಿ ಬಿನ್ ಕಅಬ್‌ನಲ್ಲಿಯೂ ನನ್ನನ್ನು ಉಳಿಸಲು ಮಕ್ಕಾದಲ್ಲಿ ಯಾರೂ ಇಲ್ಲ. ಆದ್ದರಿಂದ ಅವರು ಸ್ವಲ್ಪ ಸಂಕೋಚನವನ್ನು ತೋರಿಸಿದರು. ಒಂದು ವರದಿಯ ಪ್ರಕಾರ, ಪ್ರವಾದಿ(ಸ)ರ ಬಳಿ ಈ ಸಂದರ್ಭದಲ್ಲಿ ಹಝ್ರತ್ ಉಮರ್(ರ) ಇದು ಕೂಡ ಹೇಳಿದರು: ಯಾ ರಸೂಲಲ್ಲಾಹ್! ನೀವು ಬಯಸಿದರೆ, ನಾನು ಅವರ ಬಳಿಗೆ ಹೋಗುತ್ತೇನೆ, ಆದರೆ ಪ್ರವಾದಿ(ಸ) ಅವರು ಏನನ್ನೂ ಹೇಳಲಿಲ್ಲ. ಹಝ್ರತ್ ಉಸ್ಮಾನ್ ಬಿನ್ ಅಫಾನ್ ಅವರಿಗಿಂತ ಖುರೈಶ್ ದೃಷ್ಟಿಯಲ್ಲಿ ಹೆಚ್ಚು ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ ಎಂದು ಹಝ್ರತ್ ಉಮರ್(ರ) ಹೇಳಿದ್ದಾರೆ. ತದನಂತರ ಪ್ರವಾದಿ(ಸ) ಅವರು ಹಝ್ರತ್ ಉಸ್ಮಾನ್(ರ) ಅವರನ್ನು ಕರೆದು ಅಬು ಸುಫ್ಯಾನ್ ಮತ್ತು ಖುರೈಶ್‌ನ ಇತರ ಗಣ್ಯರ ಬಳಿಗೆ ಉಸ್ಮಾನ್ ಯುದ್ಧಕ್ಕೆ ಬಂದಿಲ್ಲ ಅವರು ಕಅಬಾಗೆ ಗೌರವ ಸಲ್ಲಿಸಲು ಮತ್ತು ಅದರ ಪಾವಿತ್ರ್ಯಕ್ಕೆ ಗೌರವ ಸಲ್ಲಿಸಲು ಮಾತ್ರ ಬಂದಿದ್ದಾರೆ ಎಂದು ತಿಳಿಸಲು ಕಳುಹಿಸಿದರು. (ಸೀರತ್ ಇಬ್ನ್ ಹಿಶಮ್, ಪುಟ-685, ದಾರ್ ಅಲ್-ಕಿತಾಬ್ ಅಲ್-ಅಲಾಮಿಯಾ ಬೈರುತ್ 2001) (ಸಬ್ಲುಲ್ ಹುದಾ ವರ್‌ರ್ಶಾದ್, ಸಂಪುಟ-5, ಪುಟ-46)

ಈ ವಿವರವನ್ನು ಈಗಾಗಲೇ ಉಸ್ಮಾನ್ ಸಂದರ್ಭದಲ್ಲಿ ಉಲ್ಲೇಖಿಸಲಾಗಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ರವರು ಬರೆಯುತ್ತಾರೆ: ಹುದೈಬಿಯಾ ಸಂಧಿಯ ಶರತ್ತುಗಳನ್ನು ಬರೆಯುತ್ತಿದ್ದಾಗ, ಮಕ್ಕದ ಖುರೈಶಿಗಳ ದೂತನಾದ ಸುಹೈಲ್‌ನ ಮಗನಾದ ಅಬೂಜಂದಲ್ ಅಲ್ಲಿಗೆ ತಲುಪಿದನು. ಅವನನ್ನು ಕೈಕೋಳ ಮತ್ತು ಸಂಕೋಲೆಯಿಂದ ಬಿಗಿಯಲಾಗಿತ್ತು. ಅವನು ಮುಸ್ಲಿಮನಾದ ಕಾರಣದಿಂದ ಅವನನ್ನು ಮಕ್ಕದವರು ಬಂಧಿಸಿದ್ದರು ಮತ್ತು ಕಠಿಣವಾದ ಶಿಕ್ಷೆಗೆ ಗುರಿಪಡಿಸಿದ್ದರು. ಆ ಸಮಯದಲ್ಲಿ ಸುಹೈಲ್ ಹೀಗೆ ನಿಬಂಧನೆ ಬರೆಯುತ್ತಿದ್ದರು: ಮಕ್ಕದಿಂದ ಮುಸ್ಲಿಮರ ಕಡೆಗೆ ಬರುವ ಪ್ರತಿಯೊಬ್ಬ ವ್ಯಕ್ತಿಯನ್ನು ಮರಳಿ ಕಳುಹಿಸಬೇಕಾಗುವುದು. ಸುಹೈಲ್‌ನ ಮಗನು ಹೇಳಿದನು: 'ಎಲೈ ಮುಸ್ಲಿಮರೇ, ನಾನು ಮುಸ್ಲಿಮನಾದ ಕಾರಣದಿಂದ ಮಕ್ಕದವರು ನನ್ನನ್ನು ಶಿಕ್ಷಿಸುತ್ತಿದ್ದಾರೆ. ನನ್ನನ್ನು ರಕ್ಷಿಸಿರಿ.' ಮುಸ್ಲಿಮರು ಇದರಿಂದ ಬಹಳ ದುಃಖಿತರಾಗಿದ್ದರು. ಆದರೆ ಸುಹೈಲ್ ತನ್ನ ಹಠವನ್ನು ಬಿಡಲಿಲ್ಲ. ಅವನು ಹೇಳಿದನು: ಅಬೂಜಂದಲ್‌ನನ್ನು ನನಗೆ ಬಿಟ್ಟುಕೊಡಿರಿ. ಇದು ನನ್ನ ಮೊದಲ ಬೇಡಿಕೆಯಾಗಿದೆ. ಹಝ್ರತ್ ಪೈಗಂಬರ್(ಸ) ಸುಹೈಲ್‌ರೊಡನೆ ಹೇಳಿದರು: ಈಗ ಒಪ್ಪಂದ ಪೂರ್ತಿಯಾಗಿಲ್ಲ. ಆದರೆ ಸುಹೈಲ್ ಸಮ್ಮತಿಸಲಿಲ್ಲ.

ಅವನು ಹೇಳಿದನು: ಅಬೂಜಂದಲ್‌ನನ್ನು ನೀವು ಮಕ್ಕಕ್ಕೆ ಮರಳಿ ಕಳುಹಿಸುವುದಿಲ್ಲವಾದರೆ, ಈ ಒಪ್ಪಂದ ಕೊನೆಗೊಂಡಿದೆ ಎಂದು ತಿಳಿಯಿರಿ. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: "ಸಭ್ಯತೆ ಮತ್ತು ಔದಾರ್ಯವೆಂಬ ರೀತಿಯಲ್ಲಾದರೂ ಅಬೂಜಂದಲ್‌ನನ್ನು ನಮಗೆ ಕೊಡಿರಿ." ಆದರೂ ಸುಹೈಲ್ ಅಂಗೀಕರಿಸಲಿಲ್ಲ. ಅಬೂಜಂದಲ್‌ರೊಡನೆ ಸಹನೆದೋರಲು ಉಪದೇಶಿಸುತ್ತಾ ಅಲ್ಲಾಹನ ಮೇಲೆ ಭರವಸೆ ಇರಿಸಲು ಹಝ್ರತ್ ಪೈಗಂಬರ್(ಸ) ಹೇಳಿದರು. ಈ ದೃಶ್ಯವು ಮುಸ್ಲಿಮರಿಗೆ ಬಹಳ ದುಃಖವನ್ನು ಉಂಟುಮಾಡುವುದಾಗಿತ್ತು. ಕೊನೆಗೆ ಹಝ್ರತ್ ಉಮರ್‌ರಿಂದ(ರ) ಸಹಿಸಲು ಸಾಧ್ಯವಾಗಲಿಲ್ಲ. ಹಝ್ರತ್ ಉಮರ್(ರ) ನಡುಗುವ ಸ್ವರದಲ್ಲಿ ಹಝ್ರತ್ ಪೈಗಂಬರ್‌ರೊಡನೆ(ಸ) ಕೇಳಿದರು: ನೀವು ಅಲ್ಲಾಹನ ಸತ್ಯಸಂಧರಾದ ಪ್ರವಾದಿಯಲ್ಲವೇ? ನಮ್ಮ ಶತ್ರುಗಳು ಇರುವುದು ಅಸತ್ಯದಲ್ಲಿ ಅಲ್ಲವೇ? ಹಾಗಾದರೆ, ನಾವು ನಿಂದತೆಯನ್ನು ಏಕೆ ಸಹಿಸಬೇಕು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಅಲ್ಲಾಹನ ಪ್ರವಾದಿಯಾಗಿರುವೆನು. ಅವನ ಇಚ್ಛೆಯನ್ನು ನಾನು ಬಲ್ಲನು. ಅವನ ಇಂಗಿತಕ್ಕೆ ವಿರುದ್ಧವಾಗಿ ನನಗೆ ಹೋಗಲು ಸಾಧ್ಯವಲ್ಲ. ಅಲ್ಲಾಹನೇ ನನ್ನ ಸಹಾಯಕ. ಹಝ್ರತ್ ಉಮರ್(ರ) ಹೇಳಿದರು: ನಾವು ಬೈತುಲ್ಲಾಹ್‌ದ ತವಾಫ್ ಮಾಡುವೆವು ಎಂದು ನೀವು ನಮ್ಮೊಡನೆ ಹೇಳಲಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಖಂಡಿತವಾಗಿಯೂ ಹೇಳಿದ್ದೆ. ಆದರೆ ಇದೇ ವರ್ಷ ತವಾಫ್ ಮಾಡುವೆವು ಎಂದು ನಾನು ಹೇಳಲಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಈ ವರ್ಷ ಹೋಗುವೆವು ಎಂದು ಹೇಳಲಿಲ್ಲವೆಂಬುದು ಸರಿಯೇ ಆಗಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ, ಕಾಯುತ್ತಾ ಇರು. ಖಂಡಿತವಾಗಿಯೂ ನೀವು ಮಕ್ಕದಲ್ಲಿ ಪ್ರವೇಶಿಸುವಿರಿ. ಬೈತುಲ್ಲಾಹ್‌ದ ತವಾಫ್ ಮಾಡುವಿರಿ. ಈ ಆವೇಶದ ಸ್ಥಿತಿಯಲ್ಲಿ ಹಝ್ರತ್ ಉಮರ್‌ರಿಗೆ(ಸ) ಸಮಾಧಾನವಾಗಲಿಲ್ಲ. ಅವರು ಅಲ್ಲಿಂದ ಎದ್ದುನಿಂತು ಹಝ್ರತ್ ಅಬೂಬಕರ್‌ರ(ರ) ಬಳಿಗೆ ಹೋದರು. ಅವರೊಡನೆ ಸಹ ಇದೇ ರೀತಿಯ ಆವೇಶದ ಮಾತುಗಳನ್ನಾಡಿದರು. ಹಝ್ರತ್ ಉಮರ್‌ರನ್ನು(ರ) ಉಪದೇಶಿಸುತ್ತಾ ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಉಮರ್, ಜಾಗರೂಕತೆಯಿಂದ ಇರು. ಹಝ್ರತ್ ಪೈಗಂಬರರ(ಸ) ಪೀಠದಲ್ಲಿ ನೀನು ಇರಿಸಿರುವ ಕೈಯನ್ನು ಸಡಿಲಗೊಳಿಸಬೇಡ. ನಾವು ಯಾರ ಕೈಯಲ್ಲಿ ಕೈಯಿಟ್ಟಿದ್ದೇವೆಯೋ ಅವರು ಸತ್ಯವಂತರು. ಹಝ್ರತ್ ಉಮರ್(ರ) ಹೇಳುತ್ತಾರೆ ಆ ಸಂದರ್ಭದಲ್ಲಿ ನಾನು ಆವೇಶದಿಂದ ಈ ಎಲ್ಲಾ ಮಾತುಗಳನ್ನಾಡಿದೆ ಆದರೆ ನಂತರ ನನಗೆ ಬಹಳ ಪಶ್ಚಾತ್ತಾಪ ಆಯಿತು ಮತ್ತು ಪಶ್ಚಾತ್ತಾಪದ ಬಣ್ಣದಲ್ಲಿ ಈ ದೌರ್ಬಲ್ಯದ ಪರಿಣಾಮವನ್ನು ತೊಳೆಯಲು ನಾನು ಅನೇಕ ಅಧೀನ ಕಾರ್ಯಗಳನ್ನು ಮಾಡಿದ. ಅಂದರೆ, ಅವರು ನನ್ನ ದೌರ್ಬಲ್ಯದ ಕಲೆ ತೊಳೆಯಲು ಅವರು ಸದಖಗಳು ನೀಡಿದರು, ಉಪವಾಸ ಮಾಡಿದರು, ನವಾಫಿಲ್ ಪ್ರಾರ್ಥನೆ ಮತ್ತು ಗುಲಾಮರನ್ನು ಬಿಡುಗಡೆ ಮಾಡಿದರು.

(ಸೀರತ್ ಖಾತಮನ್ನಬಿಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–766–768)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ತನ್ನ ಖಿಲಾಫತಿಗಿಂತ ಮುಂಚಿನ ಜಲ್ಸ ಸಾಲಾನದ ತನ್ನ ಭಾಷಣದಲ್ಲಿ ಹೇಳುತ್ತಾರೆ: ಹಝ್ರತ್ ಉಮರರ(ರ) ಹೃದಯದಿಂದ ಸವಾಲಾಗಿ ಹೊರಟ ದುಃಖ ಮತ್ತು ಸಂಕಟದ ಆ ಅಳಲು, ಇತರ ಹಲವಾರು ಹೃದಯಗಳಲ್ಲಿ ಅದುಮಿ ಇತ್ತು. ಅದನ್ನು ಬಹಿರಂಗಪಡಿಸಲು ಹಝ್ರತ್ ಉಮರ್(ರ) ತೋರಿಸಿದ ಧೈರ್ಯದ ಕಾರಣದಿಂದ ಅವರು ಅನಂತರ ಜೀವನಪೂರ್ತಿ ಲಜ್ಜಿತರಾಗಿದ್ದರು. ಅನೇಕ ಉಪವಾಸಗಳನ್ನು ಇರಿಸಿದರು. ಬಹಳವಾಗಿ ಆರಾಧನೆ ನಡೆಸಿದರು. ಬಹಳಷ್ಟು ದಾನಧರ್ಮಗಳನ್ನು ನೀಡಿದರು ಮತ್ತು ಇಸ್ತಿಗ್‌ಫಾರ್ ಮಾಡಿದರು. ಹುದೈಬಿಯದಿಂದ ಉಂಟಾದ ಸಂಕಟ ಮತ್ತು ಅಸಮಾಧಾನ ತಾತ್ಕಾಲಿಕವಾಗಿತ್ತು. ಅದನ್ನು ಬಹಳ ಬೇಗನೇ ಆಕಾಶದಿಂದ ಇಳಿದ ಅನುಗ್ರಹಗಳು ಸಮಾಧಾನವಾಗಿ ಬದಲಾಯಿಸಿತು. ಆದರೆ ಅಸಹನೆಯ ಕಾರಣದಿಂದ ಹಝ್ರತ್ ಉಮರ್‌ರ ಹೃದಯದಲ್ಲಿ ಎದ್ದ ಸವಾಲಿನಿಂದ ಉಂಟಾದ ಸಂಕಟ ಮತ್ತು ದುಃಖ ಸ್ಥಿರವಾದ ಸಂಕಟ ಮತ್ತು ಅಸಮಾಧಾನವಾಗಿ ಹಝ್ರತ್ ಉಮರ್‌ರೊಂದಿಗೆ ನೆಲೆನಿಂತಿತ್ತು. ಅವರು ಹತಾಶೆಯಿಂದ ಯಾವಾಗಲೂ ಹೀಗೆ ಹೇಳುತ್ತಿದ್ದರು: ನಾನು ಹಝ್ರತ್ ಪೈಗಂಬರ್‌ರೊಡನೆ(ಸ) ಹೀಗೆ ಸವಾಲು ಕೇಳದಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಹಝ್ರತ್ ಉಮರರ(ರ) ಮರಣ ಸಮೀಪವಾದಾಗ ಅವರು ಹೀಗೆ ಹೇಳುತ್ತಿದ್ದರು: ನಾನು ಮಾಡಿದ ಸತ್ಕರ್ಮಗಳ ಪ್ರತಿಫಲವನ್ನು ನಾನು ಕೇಳುವುದಿಲ್ಲ. ನಾನು ಮಾಡಿದ ತಪ್ಪುಗಳನ್ನು ನೀನು ಕ್ಷಮಿಸು. ಅವರ ಎಲ್ಲ ತಪ್ಪುಗಳಿಗಿಂತ ಅವರ ಮನಸ್ಸನ್ನು ಅಸಮಾಧಾನಗೊಳಿಸುತ್ತಿದ್ದ ಒಂದು ತಪ್ಪು, ಹುದೈಬಿಯಾದಲ್ಲಿ ಅವರು ಹಝ್ರತ್ ಪೈಗಂಬರ್‌ರೊಡನೆ(ಸ) ಕೇಳಿದ ಸವಾಲು ಆಗಿತ್ತು. ಹುದೈಬಿಯ ಒಪ್ಪಂದ ಬರೆಯುತ್ತಿದ್ದಾಗ ಸಹಾಬರ ಅಸಮಾಧಾನ ಮತ್ತು ದುಃಖದ ಅವಸ್ಥೆಯನ್ನು ಕಂಡು ಹಝ್ರತ್ ಪೈಗಂಬರರ(ಸ) ಹೃದಯದ ಅವಸ್ಥೆಯು ಹೇಗಿತ್ತು ಎಂದು ಹಝ್ರತ್ ಪೈಗಂಬರ್‌ರಿಗೂ(ಸ) ಅವರನ್ನು ಅಪಾರವಾಗಿ ಪ್ರೀತಿಸುವ ಅಲ್ಲಾಹನಗೂ ಅಲ್ಲದೇ ಬೇರೆ ಯಾರಿಗೂ ಗೊತ್ತಿರಲಿಲ್ಲ. ಆದರೆ ಹಝ್ರತ್ ಉಮರ್‌ರ(ರ) ಪ್ರಶ್ನೆಗೆ ಉತ್ತರವಾಗಿ ಹಝ್ರತ್ ಪೈಗಂಬರರ(ಸ) ಅನುಗ್ರಹೀತ ನಾಲಗೆಯಿಂದ ಹೊರಟ ಮೂರು ಸರಳ ಪದಗಳು ಚಿಂತಿಸುವವರಿಗೆ ಬಹಳಷ್ಟು ಸಂಗತಿಗಳನ್ನು ತಿಳಿಸಿಕೊಡುತ್ತದೆ. (ಖುತ್‌ಬಾತೆ ತಾಹಿರ್, ಪುಟ–428)

ಸುಲಹ್ ಹುದೈಬಿಯಾದ ಸಂದರ್ಭದಲ್ಲಿ ಮುಸ್ಲಿಮರ ಹಾಗೂ ಮಕ್ಕದ ಖುರೈಶರ ನಡುವೆ ಬರೆಯಲ್ಪಟ್ಟ ಒಪ್ಪಂದದ ಮೇಲೆ ಹಝ್ರತ್ ಉಮರ್(ರ) ರವರ ಹಸ್ತಾಕ್ಷರವೂ ಇದ್ದವು. ಇದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ ಬರೆಯುತ್ತಾರೆ: ಈ ಒಪ್ಪಂದದ ಎರಡು ನಕಲುಪ್ರತಿಗಳನ್ನು ತಯಾರಿಸಲಾಗಿದ್ದುವು. ಸಾಕ್ಷಿಯಾಗಿ ಉಭಯ ಪಕ್ಷಗಳ ಅನೇಕ ಆದರಣೀಯ ವ್ಯಕ್ತಿಗಳು ಅದರಲ್ಲಿ ಸಹಿ ಮಾಡಿದ್ದರು. ಮುಸ್ಲಿಮರ ಕಡೆಯಿಂದ ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಅಬ್ದುರ್ರಹ್ಮಾನ್ ಬಿನ್ ಔಫ್, ಸಅದ್ ಬಿನ್ ಅಬೀ ವಖಾಸ್ ಮತ್ತು ಅಬೂ ಉಬೈದ ಸಹಿ ಮಾಡಿದ್ದರು. ಒಪ್ಪಂದವನ್ನು ಪೂರ್ತಿ ಮಾಡಿದ ನಂತರ ಸುಹೈಲ್ ಬಿನ್ ಅಮ್ರ್ ಒಪ್ಪಂದದ ನಕಲು ಪ್ರತಿಯನ್ನು ತೆಗೆದುಕೊಂಡು ಮಕ್ಕದ ಕಡೆಗೆ ಮರಳಿ ಹೋದರು. ಮತ್ತೊಂದು ನಕಲುಪ್ರತಿ ಹಝ್ರತ್ ಪೈಗಂಬರರ(ಸ) ಬಳಿಯಲ್ಲಿತ್ತು. (ಸೀರತ್ ಖಾತಮನ್ನಬಿಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–769)

ಹುದೈಬಿಯಾ ಸಂಧಿಯಿಂದ ಮರಳಿಬಂದುದರ ಕುರಿತು ಸೀರತ್ ಖಾತಮುನ್ನಬಿಯ್ಯೀನನಲ್ಲಿ ಹೀಗೆ ಬರೆಯಲಾಗಿದೆ: ಖುರ್‌ಬಾನಿ ಇತ್ಯಾದಿಗಳು ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಮದೀನದ ಕಡೆಗೆ ಮರಳಿಹೋಗಲು ಸಹಾಬರೊಡನೆ ಆಜ್ಞಾಪಿಸಿದರು. ಆಗ ಹುದೈಬಿಯಾಗೆ ಬಂದು 20 ದಿನಗಳಷ್ಟು ಆಗಿದ್ದುವು. ಹುದೈಬಿಯಾದಿಂದ ಮರಳಿ ಬರುವಾಗ ಕರಾಉಲ್‌ಗ್‌ಮೀಮ್ ಎಂಬ ಸ್ಥಳಕ್ಕೆ ಮುಸ್ಲಿಮರು ತಲುಪಿದರು. ಅಲ್ಲಿ ಹಝ್ರತ್ ಪೈಗಂಬರ್(ಸ) ಸಹಾಬರನ್ನು ಒಟ್ಟು ಸೇರಿಸಿ ಹೇಳಿದರು: ಇಂದು ರಾತ್ರಿ ಲೋಕದ ಎಲ್ಲ ವಸ್ತುಗಳಿಗಿಂತ ಹೆಚ್ಚು ಪ್ರಿಯವಾದ ಒಂದು ಸೂರತ್ ನನಗೆ ಅವತೀರ್ಣವಾಗಿದೆ. ಅದು ಹೀಗಿದೆ: **ಇನ್ನಾ ಫತಹ್‌ನಾ ಲಕ ಫತ್‌ಹನ್ ಮುಬೀನಾ. ಲಿಯಗ್‌ಫಿರ್‌ಲಕಲ್ಲಾಹು ಮಾ ತಖದ್ದಮ ಮಿನ್‌ಧಂಬಿಕ ವಮಾ ತಅಖ್ಖರ ವಯುತಿಮ್ಮ ನಿಅ್‌ಮತುಹೂ ಅಲೈಕ ವಯಹ್‌ದಿಯಕ ಸೀರತನ್ ಮುಸ್ತಖೀಮಾ. ವಯನ್‌ಸುರುಕಲ್ಲಾಹು ನಸ್‌ರನ್ ಅಝೀಝಾ.** ಹೀಗೆ ಮುಂದುವರೆಸುತ್ತಾ ಸೂರಾ ಫತಹ್‌ನ 28ನೇ ಆಯತನ್ನು ಸಹ ಓದಿಹೇಳಿದರು. ಅದು ಹೀಗಿದೆ: **ಲಖದ್ ಸದಖಲ್ಲಾಹು ರಸೂಲಹುರ್‍ರುಅ್‌ಯಾ ಬಿಲ್‌ಹಖ್ಖ್. ಲತದ್‌ಖುಲುನ್ನಲ್ ಮಸ್‌ಜಿದಲ್ ಹರಾಮಿ ಇನ್‌ಶಾ ಅಲ್ಲಾಹು ಆಮಿನೀನ ಮುಖಲ್ಲಿಖೀನ ರುಊಸಕುಂ ವ ಮುಖಸ್ಸಿರೀನ ಲಾ ತಖಾಫೂನ್.**

ಈ ವಚನಗಳ ಅರ್ಥ ಹೀಗಿದೆ: "ನಿಜವಾಗಿಯೂ ನಾವು ನಿನಗೆ ವಿಜಯವನ್ನು ನೀಡಿರುವೆವು. ಸ್ಪಷ್ಟವಾದೊಂದು ವಿಜಯ. ನಿನ್ನ ಹಿಂದಿನ ಮತ್ತು ಮುಂದಿನ ಕುಂದುಕೊರತೆಗಳನ್ನು ಅಲ್ಲಾಹನು ನಿನ್ನಿಂದ ಮರೆಮಾಚಲಿಕ್ಕೂ ನಿನ್ನ ಮೇಲೆ ಅವನ ಅನುಗ್ರಹಗಳನ್ನು ಪೂರ್ಣಗೊಳಿಸಲಿಕ್ಕೂ ನಿನ್ನನ್ನು ಸತ್ಪಥದಲ್ಲಿ ನಡೆಸಲಿಕ್ಕೂ; ಅಲ್ಲಾಹನು ನಿನಗೆ ಮಹತ್ವದ ಸಹಾಯದಿಂದ ನೆರವಾಗಲಿಕ್ಕೂ ಬೇಕಾಗಿ...... ಅಲ್ಲಾಹನಿಚ್ಛಿಸಿದರೆ ಖಂಡಿತವಾಗಿಯೂ ನೀವು ಶಾಂತಚಿತ್ತರಾಗಿಯೂ ತಲೆಮುಂಡನ ಮಾಡಿದ ಅಥವಾ ತಲೆಗೂದಲು ಕತ್ತರಿಸಿದ ಸ್ಥಿತಿಯಲ್ಲಿಯೂ ಪವಿತ್ರ ಮಸೀದಿಯನ್ನು ನಿರ್ಭಯವಾಗಿ ಪ್ರವೇಶಿಸಿರಿ ಎಂಬ ಆ ಸ್ವಪ್ನವನ್ನು ಅಲ್ಲಾಹನು ತನ್ನ ಸಂದೇಶವಾಹಕನಿಗೆ ಯಥಾ ಪ್ರಕಾರ ಈಡೇರಿಸಿಕೊಟ್ಟಿರುವನು.

ಈ ಆಯತುಗಳನ್ನು ಹಝ್ರತ್ ಪೈಗಂಬರ್(ಸ) ಸಹಾಬರಿಗೆ ಓದಿಹೇಳಿದಾಗ ಕೆಲವು ಸಹಾಬರು ಅಚ್ಚರಿಗೊಂಡರು. ಬಾಹ್ಯವಾಗಿ ನೋಡುವಾಗ ಪರಾಜಯವೆಂದು ತೋರುತ್ತಿದ್ದ ಸಂಗತಿಯನ್ನು ಅಲ್ಲಾಹನು ಇಲ್ಲಿ ವಿಜಯವೆಂದು ಹೇಳುತ್ತಿದ್ದಾನೆ. ಕೆಲವು ಸಹಾಬರ ಹೀಗೆಯೂ ಹೇಳಿದರು: ಇದು ವಿಜಯವೇ? ನಾವು ಬೈತುಲ್ಲಾಹ್‌ದ ತವಾಫ್ ಸಹ ಮಾಡಿಲ್ಲ. ಈ ಮಾತುಗಳು ಹಝ್ರತ್ ಪೈಗಂಬರ್‌ರ ಕಿವಿಗೆ ತಲುಪಿದಾಗ ಅವರು ಬಹಳ ಬೇಸರವನ್ನು ವ್ಯಕ್ತಪಡಿಸಿದರು. ಸಂಕ್ಷೇಪವಾದ ಒಂದು ಭಾಷಣವನ್ನು ಹೀಗೆ ಮಾಡಿದರು: "ಇದು ಬಹಳ ವ್ಯರ್ಥವಾದ ಆಕ್ಷೇಪವಾಗಿದೆ. ಏಕೆಂದರೆ, ಚಿಂತಿಸುವುದಾದರೆ, ಹುದೈಬಿಯಾ ಸಂಧಿ ನಮಗೆ ಬಹಳ ದೊಡ್ಡದಾದ ವಿಜಯವಾಗಿದೆ. ನಮ್ಮ ವಿರುದ್ಧ ಯುದ್ಧ ಮಾಡಲಿಕ್ಕಾಗಿ ಹೊರಟಿದ್ದ ಖುರೈಶಿಗಳು ಸ್ವತಃ ಯುದ್ಧ ಮಾಡದೇ ಶಾಂತಿಯ ಒಪ್ಪಂದ ಮಾಡಿರುವರು. ಮುಂದಿನ ವರ್ಷ ಮಕ್ಕದ ಬಾಗಿಲು ನಮಗಾಗಿ ತೆರೆಯುವುದಾಗಿ ವಾಗ್ದಾನವನ್ನು ಸಹ ಮಾಡಿರುವರು. ನಾವು ಶಾಂತಿ ಸಮಾಧಾನದಿಂದ ಮಕ್ಕದವರು ಪಿತೂರಿಗಳಿಂದ ಸುರಕ್ಷಿತರಾಗಿ ಬರಲಿರುವ ವಿಜಯಗಳ ಸುವಾಸನೆಯನ್ನು ಪಡೆಯುತ್ತಾ ಮರಳಿ ಹೋಗುತ್ತಿದ್ದೇವೆ. ಆದ್ದರಿಂದ

ಇದು ಬಹಳ ದೊಡ್ಡದಾದ ವಿಜಯವಾಗಿದೆ.” ಸಹಾಬರು ಹೇಳಿದರು: ಯಾ ರಸೂಲಲ್ಲಾಹ್, ನಮಗೆ ಮನವರಿಕೆಯಾಯಿತು. ನಮಗೆ ಗೊತ್ತಾಯಿತು. ನಿಮ್ಮ ದೃಷ್ಟಿ ಎಲ್ಲಿಯ ತನಕ ತಲುಪಿತೋ ಅಲ್ಲಿಯ ವರೆಗೆ ನಮ್ಮ ದೃಷ್ಟಿಗಳಿಗೆ ತಲುಪಲು ಸಾಧ್ಯವಾಗಲಿಲ್ಲ. ಆದರೆ ಈ ಒಪ್ಪಂದ ನಿಜವಾಗಿಯೂ ನಮಗೆ ಬಹಳ ದೊಡ್ಡ ವಿಜಯವಾಗಿದೆ ಎಂದು ನಮಗೆ ಈಗ ಮನವರಿಕೆಯಾಗಿದೆ.

ಪ್ರವಾದಿ(ಸ)ರವರ ಈ ಭಾಷಣಕ್ಕೆ ಮುಂಚಿತವಾಗಿ, ಹಝ್ರತ್ ಉಮರ್ ಕೂಡ ತೀವ್ರ ಗೊಂದಲದಲ್ಲಿದ್ದರು. ಅವರು ಸ್ವತಃ ಹೇಳುತ್ತಾರೆ: ಹುದೈಬಿಯಾದಿಂದ ಹಿಂದಿರುಗುವಾಗ, ಪ್ರವಾದಿ(ಸ) ರವರು ರಾತ್ರಿಯಲ್ಲಿ ಪ್ರಯಾಣಿಸುತ್ತಿದ್ದಾಗ, ನಾನು ಅವರ ಬಳಿ ಬಂದು ಪ್ರವಾದಿ(ಸ) ರನ್ನು ಉದ್ದೇಶಿಸಿ ಏನಾದರೂ ಹೇಳಬೇಕು ಎಂದು ಬಯಸಿದೆ ಆದರೆ ಅವರು ಮೌನವಾಗಿದ್ದರು. ನಾನು ಮತ್ತೆ ಮತ್ತೆ ಕೇಳಿದೆ, ಆದರೆ ಅವರು ಮೌನವಾಗಿಯೇ ಇದ್ದರು. ನನಗೆ ಪ್ರವಾದಿ(ಸ)ರವರ ಈ ಮೌನದಿಂದ ತುಂಬಾ ದುಃಖವಾಯಿತು ನಾನು ನನ್ನ ಮನಸ್ಸಿನಲ್ಲಿಯೇ ಹೇಳಿಕೊಂಡೆ ಎಲೈ ಉಮರ್ ನೀವು ನಾಶವಾಗಿದ್ದೀಯ ನೀನು ಮೂರು ಸಲ ಪ್ರವಾದಿ(ಸ)ರವರನ್ನು ಉದ್ದೇಶಿಸಿ ಹೇಳಲು ಬಯಸಿದೆ ಆದರೆ ಪ್ರವಾದಿ(ಸ)ರವರು ಉತ್ತರಿಸಲಿಲ್ಲ. ಹಾಗಾಗಿ ನಾನು ಮುಸ್ಲಿಂ ಸಮುದಾಯದ ಮುಂಚೂಣಿಗೆ ಬಂದು ಏನು ನಡೆಯುತ್ತಿದೆ ಎಂದು ಯೋಚಿಸಲು ಪ್ರಾರಂಭಿಸಿದೆ. ಮತ್ತು ನನ್ನ ಬಗ್ಗೆ ಯಾವುದೇ ಪವಿತ್ರ ಖುರ್‌ಆನ್ ಆಯತ್ ವ್ಯಕ್ತವಾಗದಿರಲಿ ಎಂದು ಭಯಭೀತನಾದೆ. ಅಷ್ಟರಲ್ಲೆ ಯಾರೋ ನನ್ನ ಹೆಸರನ್ನು ಕರೆದು ಉಮರ್ ಬಿನ್ ಖತ್ತಾಬ್ ಅವರನ್ನು ಪ್ರವಾದಿ(ಸ)ರವರು ಕರೆಯುತ್ತಿದ್ದಾರೆ ಎಂದು ಹೇಳಿದರು. ನಾನು, ನನ್ನ ಬಗ್ಗೆ ಪವಿತ್ರ ಖುರ್‌ಆನಿನ ಆಯತ್ ಒಂದು ಅವತೀರ್ಣವಾಗಿರಬಹುದು ಎಂದು ನಾನು ಯೋಚಿಸಿಕೊಂಡೆ. ಹಾಗಾಗಿ ನಾನು ಭಯಭೀತನಾಗಿ ರಸೂಲುಲ್ಲಾಹ್(ರ) ರವರ ಬಳಿ ಅವಸರದಿಂದ ಬಂದೆ. ಅವರು(ಸ) ಹೇಳಿದರು: ಈ ಸಮಯದಲ್ಲಿ ನನಗೆ ಎಂತಹ ಸೂರಃ ಅವತೀರ್ಣವಾಗಿದೆ ಎಂದರೆ ಅದು ಜಗತ್ತಿನ ಎಲ್ಲ ವಸ್ತುಗಳಿಗಿಂತ ನನಗೆ ಹೆಚ್ಚು ಪ್ರಿಯವಾಗಿದೆ. ನಂತರ ಅವರು ಸೂರಃ ಫತಹ್‌ವಿನ ವಚನಗಳನ್ನು ಪಠಿಸಿದರು. ಹಝ್ರತ್ ಉಮರ್ ಕೇಳಿದರು. ಯಾ ರಸೂಲಲ್ಲಾಹ್! ಈ ಒಪ್ಪಂದವು ನಿಜವಾಗಿಯೂ ಇಸ್ಲಾಂ ಧರ್ಮದ ವಿಜಯವೇ? ಅವರು ಹೇಳಿದರು: ಹೌದು, ಖಂಡಿತವಾಗಿಯೂ ಇದು ನಮ್ಮ ಗೆಲುವು. ಹಝ್ರತ್ ಉಮರ್ ತೃಪ್ತಿಗೊಂಡು ಮೌನವಾದರು. ಅದರ ನಂತರ, ಪ್ರವಾದಿ(ಸ) ರವರು ಮದೀನಾಕ್ಕೆ ಮರಳಿದರು. (ಸೀರತ್ ಖಾತಮನ್ನಬಿಈನ್, ಪುಟಗಳು 770-772) (ಫರ್‌ಹಂಗ್ ಸೀರತ್ ಪುಟ-200-243)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: “ಸುಲಹ್ ಹುದೈಬಿಯಾ ಒಪ್ಪಂದದ ಸಂದರ್ಭದಲ್ಲಿ, ಪ್ರವಾದಿ(ಸ) ಅವರು ಮಕ್ಕಾದ ಮುಶ್ರಿಕ್‌ಗಳೊಂದಿಗೆ ಶಾಂತಿ ಒಪ್ಪಂದ ಸ್ಥಾಪಿಸಿದರು, ಇದು ಸಹಾಬರಲ್ಲಿ ಗೊಂದಲ, ಅಶಾಂತಿಗೆ ಕಾರಣವಾಯಿತು. ಹಝ್ರತ್ ಉಮರ್(ರ) ರವರಂತಹ ವ್ಯಕ್ತಿ ಪ್ರವಾದಿ(ಸ) ರವರ ಬಳಿ ಹೋಗಿ ಹೇಳಿದರು ಯಾ ರಸೂಲಲ್ಲಾಹ್! ನಾವು ಕಅಬದ ತವಾಫ್ ಮಾಡುವೆವು ಎಂದು ಸರ್ವಶಕ್ತನಾದ ಅಲ್ಲಾಹನು ನಿಮಗೆ ಭರವಸೆ ನೀಡಲಿಲ್ಲವೇ ಅಥವಾ ಇಸ್ಲಾಂ ಧರ್ಮವು ಮೇಲುಗೈ ಸಾಧಿಸಬೇಕಾಗಿಲ್ಲವೇ? ಪ್ರವಾದಿ(ಸ) ಹೇಳಿದರು: ಏಕೆ ಬೇಡ? “ಹಾಗಾದರೆ ನಾವು ಏಕೆ ಈ ಸಂಧಿ ಮಾಡಿಕೊಂಡೆವು” ಎಂದರು. ಪ್ರವಾದಿ(ಸ) ಹೇಳಿದರು: ಖಂಡಿತವಾಗಿಯೂ ನಾವು ತವಾಫ್ ಮಾಡುವುದಾಗಿ ಅಲ್ಲಾಹನು ವಾಗ್ದಾನ ಮಾಡಿದನು, ಆದರೆ ನಾವು ಅದನ್ನು ಈ ವರ್ಷ ಮಾಡುತ್ತೇವೆ ಎಂದಲ್ಲ. (ಖುತ್‌ಬತ್ ಮಹಮೂದ್, ಸಂಪುಟ-30, ಪುಟ-220)

ಈ ಪ್ರಸ್ತಾಪ ನಡೆಯುತ್ತಿದೆ. ಹಝ್ರತ್ ಉಮರ್‌ರ(ರ) ಪ್ರಸ್ತಾಪ ಮುಂದುವರೆಯುವುದು. ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝಾ ನಮಾಝ್ ನಿರ್ವಹಿಸಲಿಕ್ಕಿದೆ. ಅವರಲ್ಲಿ ಮೊದಲ ಪ್ರಸ್ತಾಪ ಅವರಲ್ಲಿ ಮೊದಲ ಪ್ರಸ್ತಾಪ ಮಲಿಕ್ ಮುಹಮ್ಮದ್ ಯೂಸುಫ್ ಸಲೀಂ ಸಾಹಿಬ್‌ರದ್ದಾಗಿದೆ. 86ನೇ ವಯಸ್ಸಿನಲ್ಲಿ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಅವರ ಕುಟುಂಬದಲ್ಲಿ ಏಕ ಅಹ್ಮದಿಯಾಗಿದ್ದರು. 1952ರಲ್ಲಿ ಅವರು ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಅವರ ಹಿರಿಯ ಸಹೋದರ ಅವರಿಗೆ ರೈಲ್ವೇಯಲ್ಲಿ ಉದ್ಯೋಗ ಕೊಡಿಸಿದ್ದರು. ಆಗ ಅಹ್ಮದಿಯಾಗಿದ್ದ ಮೀರ್ ಹಮೀದುಲ್ಲಾಹ್ ಸಾಹಿಬ್ ಅಲ್ಲಿ ಚೀಫ್ ಇಂಜಿನಿಯರ್ ಆಗಿದ್ದರು. ಅಲ್‌ಫಝ್ಲ್ ಪತ್ರಿಕೆ ಅಲ್ಲಿಗೆ ಬರುತ್ತಿತ್ತು ಮತ್ತು ಮೀರ್ ಹಮೀದುಲ್ಲಾಹ್ ಸಾಹಿಬ್ ತಬ್ಲೀಗ್ ಸಹ ಮಾಡುತ್ತಿದ್ದರು. ಅಲ್‌ಫಝ್ಲ್ ಓದಿ ಮಲಿಕ್ ಯೂಸುಫ್ ಸಾಹಿಬ್ ಅಹ್ಮದಿಯಾಗಿದ್ದರು. ಹೇಗಿದ್ದರೂ ಅವರ ಮನೆಯವರಿಗೆ ಗೊತ್ತಾದಾಗ ಅವರನ್ನು ಬಹಳವಾಗಿ ಬೆದರಿಸಿದರು. ಕೊಲ್ಲುವುದಾಗಿ ಕೂಡ ಬೆದರಿಸಿದರು. ಅಹ್ಮದಿಯ್ಯತ್ ಉಪೇಕ್ಷಿಸಲು ಹೇಳಿದರು. ಕೊನೆಗೆ ಅಪಾಯ ಬಹಳ ಹೆಚ್ಚಾದಾಗ, ಒಂದು ರಾತ್ರಿ ಅವರ ತಾಯಿ ಅವರೊಡನೆ ರಹಸ್ಯವಾಗಿ ಹೀಗೆ ಹೇಳಿದರು: ಇಲ್ಲಿಂದ ಹೊರಟುಹೋಗು ಮತ್ತು ಎಂದಿಗೂ ಬರಬೇಡ. ನಿನ್ನ ಜೀವಕ್ಕೆ ಇಲ್ಲಿ ಅಪಾಯವಿದೆ. ಹೀಗೆ ಅವರು ಮನೆ ಮತ್ತು ಆಸ್ತಿಗಳನ್ನು ಬಿಟ್ಟುಬಿಟ್ಟರು ಆದರೆ ಅಹ್ಮದಿಯ್ಯತನ್ನು ಕೈಬಿಡಲಿಲ್ಲ. ಅವರು ಪಂಜಾಬ್ ಯೂನಿವರ್ಸಿಟಿ ಲಾಹೋರಿನಿಂದ ಇಸ್ಲಾಮಿಯಾತಿನಲ್ಲಿ ಮಾಸ್ಟರ್ಸ್ ಮಾಡಿದರು. ಅನಂತರ 1958ರಲ್ಲಿ ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶಿಸಿದರು. 1963ರಲ್ಲಿ ಜಾಮಿಅ ಅಹ್ಮದಿಯಾದಿಂದ ತೇರ್ಗಡೆಯಾದರು. ಅನಂತರ ಮಲಿಕ್ ಸೈಫುರ್‌ರಹ್ಮಾನ್ ಸಾಹಿಬ್ ಇದ್ದ ಇಫ್ತಾದ ಆಫೀಸಿನಲ್ಲಿ ಅವರನ್ನು ನೇಮಿಸಲಾಯಿತು. ಇಂಚಾರ್ಜ್ ಝೋದ್ ನವೇಸಿಯಾದ ಮೌಲಾನ ಮುಹಮ್ಮದ್ ಯಾಖೂಬ್ ತಾಹಿರ್ ಸಾಹಿಬ್ ನಿಧನರಾದಾಗ ಅವರ ಸ್ಥಾನದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) 1967ರಲ್ಲಿ ಮಲಿಕ್ ಯೂಸುಫ್ ಸಾಹಿಬ್‌ರನ್ನು ಝೋದ್ ನವೇಸಿಯ ವಿಭಾಗಕ್ಕೆ ಸ್ಥಳಾಂತರಿಸಲಾಯಿತು. 1985ರ ತನಕ ಅವರು ಇಂಚಾರ್ಜ್ ಝೋದ್ ನವೇಸಿಯಾಗಿದ್ದರು. ಝೋದ್ ನವೇಸಿಯ ಎಂದರೆ ಶೀಘ್ರಲಿಪಿಯ ಕೆಲಸಗಳನ್ನು ಮಾಡಲಾಗುವ ಆಫೀಸಿನಲ್ಲಿ ಖುತ್‌ಬಗಳ ಮತ್ತು ಭಾಷಣಗಳ ರಿಪೋರ್ಟ್‌ಗಳು ಮತ್ತು ಪರ್ಯಟನೆಯ ರಿಪೋರ್ಟ್‌ಗಳು ಇತ್ಯಾದಿಗಳನ್ನು ತಯಾರುಮಾಡುವ ಡ್ಯೂಟಿ ಅವರಿಗೆ ಇತ್ತು. 1978ರಲ್ಲಿ ಲಂಡನಿನಲ್ಲಿ ಜರುಗಿದ ಕಸ್ರೇ ಸಲೀಬ್ ಕಾನ್ಫೆರೆನ್ಸ್‌ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಭಾಗಿಯಾಗಿದ್ದರು. ಅದರಲ್ಲೂ ಇವರು ಖಲೀಫತುಲ್ ಮಸೀಹ್‌ರೊಂದಿಗೆ ಇದ್ದರು ಮತ್ತು ರಿಪೋರ್ಟ್ ತಯಾರು ಮಾಡಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರೊಂದಿಗೆ ಸವಾನಹ್ ಫಝ್ಲೇ ಉಮರ್ ಎಂಬ ಗ್ರಂಥದ ತಯಾರಿಯಲ್ಲೂ ಅವರು ಬಹಳ ಕೆಲಸ ಮಾಡಿದರು. ಅವರು ಮಾಡಿದ ಈ ಔದಾರ್ಯವನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಬಹಳ ಉತ್ತಮವಾಗಿ ಪ್ರಸ್ತಾಪಿಸಿದ್ದರು. 1983ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಆಸ್ಟ್ರೇಲಿಯ, ಫಿಜಿ ಮತ್ತು ಸಿಂಗಾಪೂರ್‌ಗೆ ಪರ್ಯಟನೆ ನಡೆಸಿದಾಗ ಮಲಿಕ್ ಯೂಸುಫ್ ಸಲೀಂ ಸಾಹಿಬ್ ಸಹ ಹುಝೂರ್‌ರೊಂದಿಗೆ ಇದ್ದರು. ಹಿಜ್ರತಿನ ನಂತರ ಖುತ್‌ಬಗಳ ಆಡಿಯೋ ಕೇಸಟ್‌ಗಳ ಕಾಪಿಗಳನ್ನು ತಯಾರಿಯಲ್ಲೂ ಅವರು ಬಹಳ ಉತ್ತಮವಾಗಿ ಕೆಲಸ ಮಾಡಿದರು ಫೈಸಲಾಬಾದಿನ ಒಂದು ಜಾಗದಲ್ಲಿ ಒಬ್ಬರ ಮನೆಗೆ ಹೋಗಿಕೊಂಡು ಬಹಳ ಎಚ್ಚರಿಕೆಯಿಂದ ಆಡಿಯೋ ಕ್ಯಾಸೆಟ್‌ಗಳನ್ನು ತಯಾರು ಮಾಡಿಕೊಂಡು ಮರಳಿ ತರುತ್ತಿದ್ದರು. ಕೆಲವು ಕಾಲ ಅವರು ಫೀಲ್ಡ್‌ನಲ್ಲಿ ಮುರಬ್ಬೀಯಾಗಿಯೂ ಇದ್ದರು. ತಾಹಿರ್ ಫೌಂಡೇಶನ್‌ನಲ್ಲಿ ಖುತ್‌ಬಗಳ ಕೆಲಸದಲ್ಲಿ ಅವರಿಗೆ ಕೆಲಸ ಮಾಡಲು ಸೌಭಾಗ್ಯ ಲಭಿಸಿತು. ಪ್ರೈವೇಟ್ ಸೆಕ್ರಟರಿಯಲ್ಲಿ ಶೂರಾದ ಕೆಲಸಗಳನ್ನು ಬರೆಯಲು ಅವರಿಗೆ ಸೌಭಾಗ್ಯ ಲಭಿಸಿತು. ರಿಟೈರ್‌ಮೆಂಟಿನ ನಂತರ ರೀ ಎಂಪ್ಲೋಯ್‌ಮೆಂಟ್ ಆಗುತ್ತಿದ್ದರು. ಅನಂತರ 2013ರಲ್ಲಿ ರೋಗದ ಕಾರಣದಿಂದ ಅವರು ನಿವೃತ್ತಿ ಪಡೆದರು. ಅವರು ಎರಡು ವಿವಾಹಗಳನ್ನು ಮಾಡಿದ್ದರು ಮೊದಲ ವಿವಾಹದಲ್ಲಿ ಒಬ್ಬಳು ಮಗಳು ಹುಟ್ಟಿದಳು. ಅನಂತರ ಅವರ ಪತ್ನಿ ನಿಧನರಾದರು. ಅನಂತರ ಎರಡನೇ ವಿವಾಹದಲ್ಲಿ ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರಿದ್ದರು.

ಅವರ ಮಗಳಾದ ಖುದ್‌ಸಿಯ ಮಹ್ಮೂದ್ ಹೇಳುತ್ತಾರೆ: ನನ್ನ ತಂದೆಯವರು ನಮ್ಮ ಸಂಬಂಧವನ್ನು ಅಲ್ಲಾಹನೊಡನೆ ಜೋಡಿಸಿದ್ದರು. ಅದರ ಬಗ್ಗೆ ಬಹಳ ಉಪದೇಶಿಸುತ್ತಿದ್ದರು. ನಮಾಝ್‌ಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಹೇಳುತ್ತಿದ್ದರು. ನಮಾಝ್ ತಡವಾಗಿ ನಿರ್ವಹಿಸಿದರೆ ಬೇಸರಪಡುತ್ತಿದ್ದರು .ತಹಜ್ಜುದ್ ನಮಾಝ್‌ನಲ್ಲಿ ಬಹಳ ವಿನಮ್ರತೆಯಿಂದ ದುಆ ಮಾಡುತ್ತಿದ್ದರು. ಪವಿತ್ರ ಖುರ್‌ಆನಿನ ಒಂದು ಜುಝ್ಉ ದಿನಾಲೂ ಓದುತ್ತಿದ್ದರು. ನಮಾಝಿನ ಸಮಯವಾಯಿತೇ ಎಂದು ರೋಗಾವಸ್ಥೆಯಲ್ಲಿದ್ದಾಗಲೂ ಕೇಳುತ್ತಾ ಇದ್ದರು. ನಮಾಝ್ ಬಗ್ಗೆ ಅವರಿಗೆ ಬಹಳ ಕಾಳಜಿ ಮತ್ತು ಚಿಂತೆಯಿತ್ತು. ಖಿಲಾಫತಿನೊಂದಿಗೆ ಪ್ರೀತಿ ಮತ್ತು ಪ್ರೇಮವನ್ನು ಅವರು ನಮ್ಮಲ್ಲಿ ತುಂಬಿಸಿದ್ದರು. ಖಿಲಾಫತಿನೊಂದಿಗೆ ಅಪಾರವಾದ ಪ್ರೇಮವಿತ್ತು. ಎಲ್ಲ ಅನುಗ್ರಹಗಳು ಖಲೀಫರನ್ನು ಅನುಸರಿಸುವುದರಿಂದಲೇ ಲಭಿಸುವುದು ಎಂದು ಹೇಳುತ್ತಿದ್ದರು. ಅಹ್ಮದಿಯ್ಯತ್ ಬಗ್ಗೆ ಬಹಳ ಕಷ್ಟತೆಗಳನ್ನು ಅನುಭವಿಸುತ್ತಿದ್ದರು. ಎಸಿಸ್ಟಂಟ್ ಪ್ರೈವೇಟ್ ಸೆಕ್ರಟರಿಯಾದ ರಶೀದ್ ತಾಹಿರ್ ಸಾಹಿಬ್ ಹೇಳುತ್ತಾರೆ: ಮೂರನೇ ಖಿಲಾಫತಿನ ಕಾಲದಲ್ಲಿ ಸಲೀಂ ಸಾಹಿಬ್ ಝೋದ್ ನವೇಸಿ ವಿಭಾಗಕ್ಕೆ ಬಂದರು. ಈ ವಿಭಾಗದಲ್ಲಿ ದೀರ್ಘಕಾಲ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಭಾಷಣಗಳನ್ನೆಲ್ಲ ಲಿಖಿತರೂಪಕ್ಕೆ ತರುತ್ತಿದ್ದರು. ಅಲ್‌ಫಝ್ಲ್ ಪತ್ರಿಕೆಗಾಗಿ ರಿಪೋರ್ಟ್‌ಗಳನ್ನು ತಯಾರುವಾಡುತ್ತಿದ್ದರು. ಬಹಳ ಜವಾಬ್ದಾರಿಕೆಯಿಂದ ವ್ಯವಸ್ಥಾಪಿತವಾಗಿ ಮತ್ತು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಸಾಹಿತ್ಯದ ಮಟ್ಟವು ಸಹ ಬಹಳ ಉತ್ತಮವಾಗಿತ್ತು. ಅವರಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರೊಂದಿಗೆ ಅವರ ವಿದೇಶ ಪರ್ಯಟನೆಯಲ್ಲಿ, ಆಫ್ರಿಕ ಮತ್ತು ಯೂರೋಪಿನಲ್ಲೂ ಅವರಿಗೆ ಹೋಗಲು ಸಂದರ್ಭ ಸಿಕ್ಕಿತು. ಬಹಳ ಸೂಕ್ಷ್ಮತೆಯಿಂದ ತಮ್ಮ ಕೆಲಸ ಮಾಡುತ್ತಿದ್ದರು. ಒಂದೊಂದು ಪದವನ್ನು

ಬಹಳ ಎಚ್ಚರಿಕೆಯಿಂದ ದುಆ ಮಾಡುತ್ತಾ ಬರೆಯುತ್ತಿದ್ದರು. 2013ರಲ್ಲಿ ಅವರು ನಿವೃತ್ತರಾದಾಗಲೂ ಶೂರಾದ ರಿಪೋರ್ಟಿನ ಕೆಲಸಕ್ಕಾಗಿ ಆಫೀಸಿನಿಂದ ಕರೆದಾಗಲೆಲ್ಲ ಹೋಗುತ್ತಿದ್ದರು. ಈ ಕೆಲಸವನ್ನು ಸೌಭಾಗ್ಯವೆಂದು ಭಾವಿಸುತ್ತಿದ್ದರು. ತಮ್ಮ ಕೆಲಸದಲ್ಲಿ ಮಗ್ನರಾಗಿದ್ದ ಸಮಾಧಾನಚಿತ್ತರಾದ ವ್ಯಕ್ತಿಯಾಗಿದ್ದರು. ಅವರು ವಖ್ಫಿನ ಹಕ್ಕನ್ನು ಸಹ ಈಡೇರಿಸಿದರು. ಮೌನವಾಗಿ ಎಲ್ಲ ಕೆಲಸವನ್ನು ಮಾಡುತ್ತಿದ್ದರು. ಯಾವುದೇ ಬೇಡಿಕೆ ಮುಂದಿರಿಸಲಿಲ್ಲ. ಬಹಳ ಸರಳವಾಗಿ ಇರುವವರು. ಅಲ್ಲಾಹನು ಅವರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಎರಡನೇ ಪ್ರಸ್ತಾಪ ಖಾದಿಯಾನಿನ ಬಶೀರ್ ಅಹ್ಮದ್ ಕಾಲಾ ಅಫ್‌ಘಾನ್ ದರ್ವೇಶರ ಮಗನಾದ ಸನ್ಮಾನ್ಯ ಶುಐಬ್ ಅಹ್ಮದ್ ಸಾಹಿಬ್‌ರದ್ದಾಗಿದೆ. 56ನೇ ವಯಸ್ಸಿನಲ್ಲಿ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1987ರಲ್ಲಿ ಜಮಾಅತಿನ ನೌಕರಿ ಶುರುಮಾಡಿದರು. ಸದರ್ ಅಂಜುಮನ್ ಅಹ್ಮದಿಯಾದ ಹಲವು ವಿಭಾಗಗಳಲ್ಲಿ ಉದ್ಯೋಗಿಯಾಗಿ, ಆಫೀಸರ್ ಆಗಿ ಮತ್ತು ನಾಝಿರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಇಂಚಾರ್ಜ್ ದಫ್ತರ್ ಉಲ್‌ಯ, ಇಂಚಾರ್ಜ್ ಜಲ್ಸ ಸಾಲಾನ, ನಾಝಿರ್ ಬೈತುಲ್ ಮಾಲ್ ಖರ್ಚ್, ನಾಝಿಂ ವಖ್ಫೇ ಜದೀದ್ ಮಾಲ್, ಅಫ್ಸರ್ ಜಲ್ಸ ಸಾಲಾನ ಮತ್ತು ಭಾರತದ ಸದರ್ ಖುದ್ದಾಮುಲ್ ಅಹ್ಮದಿಯಾ ಆಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಅವರು 33 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿದರು. ಆರಾಧನೆಯ ಕಡೆಗೆ ಅವರಿಗೆ ಬಹಳ ಶ್ರದ್ಧೆ ಇತ್ತು. ತಹಜ್ಜುದ್ ಮತ್ತು ಐಚ್ಛಿಕ ನಮಾಝ್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಖಿಲಾಫತಿನ ಅನುಸರಣೆಯಲ್ಲೂ ಉನ್ನತ ಮಟ್ಟವನ್ನು ಇರಿಸಿದ್ದರು. ಖಲೀಫರಿಂದ ಏನೇ ನಿರ್ದೇಶನ ಬಂದರೂ ಬೇಗನೇ ಕಾರ್ಯಗತಗೊಳಿಸಬೇಕೆಂದು ಹೇಳುತ್ತಿದ್ದರು. ಪವಿತ್ರ ಖುರ್‌ಆನಿನ ಗಹನವಾದ ಅರಿವು ಇತ್ತು. ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರ ಗ್ರಂಥಗಳನ್ನು ಬಹಳವಾಗಿ ಓದುತ್ತಿದ್ದರು. ಬಹಳ ಧಾರ್ಮಿಕ ಜ್ಞಾನ ಹೊಂದಿದ್ದರು. ಪ್ರತಿಯೊಂದು ವಿಷಯದಲ್ಲಿ ಭಾಷಣ ಮಾಡಲು ಬಲ್ಲವರಾಗಿದ್ದರು. ಬಹಳ ಹಸನ್ಮುಖಿ ಮತ್ತು ಸ್ನೇಹಮಯಿಯಾಗಿದ್ದರು. ಎಲ್ಲ ಮಟ್ಟದ ಜನರೊಂದಿಗೆ ಪ್ರೀತಿ ಮತ್ತು ಪ್ರೇಮದಿಂದ ವರ್ತಿಸುತ್ತಿದ್ದರು. ನಿರ್ಗತಿಕರ ಮತ್ತು ತಮ್ಮ ಅಡಿಯಲ್ಲಿ ಕೆಲಸ ಮಾಡುವವರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಖಾದಿಯಾನಿನ ಪ್ರತಿಯೊಬ್ಬರೂ ಅವರನ್ನು ಪ್ರಶಂಸಿಸುತ್ತಿದ್ದಾರೆ. ಧೈರ್ಯದಿಂದ ಇರುವವರೂ ಕೃತಜ್ಞತೆಯುಳ್ಳವರೂ ಆಗಿದ್ದರು. ದಿವಂಗತರು ಮೂಸಿಯಾಗಿದ್ದರು. ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಅಗಲಿರುವರು. ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ಸದರ್ ಆದ ಜಲಾಲುದ್ದೀನ್ ನಯ್ಯರ್ ಸಾಹಿಬ್‌ರ ಅಳಿಯರಾಗಿದ್ದರು. ಖಾದಿಯಾನಿನ ನಾಝಿರ್ ಬೈತುಲ್ ಮಾಲ್ ಆಗಿರುವ ರಫೀಕ್ ಬೇಗ್ ಸಾಹಿಬ್ ಬರೆಯುತ್ತಾರೆ: ಶುಐಬ್ ಸಾಹಿಬ್‌ರೊಂದಿಗೆ 18 ವರ್ಷಗಳ ಕಾಲ ಭಾರತದ ಖುದ್ದಾಮುಲ್ ಅಹ್ಮದಿಯಾದಲ್ಲೂ ಮತ್ತು ಜಲ್ಸ ಸಾಲಾನದಲ್ಲೂ ಅವರೊಂದಿಗೆ ಸೇವೆ ಸಲ್ಲಿಸಲು ಸಂದರ್ಭ ಸಿಕ್ಕಿದೆ. ಅವರು ತನ್ನ ಸ್ವಂತ ಮಾದರಿಯಿಂದ ಸೇವೆ ಸಲ್ಲಿಸುವವರನ್ನು ತಮ್ಮೊಂದಿಗೆ ಸೇರಿಸಿ ಕೆಲಸ ಮಾಡುತ್ತಿದ್ದರು. ಜಲ್ಸ ಸಾಲಾನದ ದಿನಗಳಲ್ಲಿ ರಾತ್ರಿ ಮೂರು ನಾಲ್ಕು ಗಂಟೆಯ ವರೆಗೆ ಆಫೀಸಿನಲ್ಲಿ ಇರುತ್ತಿದ್ದರು. ವಸತಿಗೃಹಗಳು ಅವಲೋಕನ ನಡೆಸುತ್ತಿದ್ದರು. ಎಲ್ಲಾದರೂ ಹೆಚ್ಚು ಕಮ್ಮಿ ಕಂಡುಬಂದರೆ ಬೇಗನೇ ಹೋಗಿ ಅದನ್ನು ಸರಿಪಡಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್‌ರ ಅತಿಥಿಗಳ ಬಗ್ಗೆ ಸರಿಯಾಗಿ ಕಾಳಜಿ ವಹಿಸುತ್ತಿದ್ದರು. ಸರಿಯಾಗಿ ಅತಿಥಿ ಸತ್ಕಾರ ಮಾಡಲು ಉಪದೇಶಿಸುತ್ತಿದ್ದರು. ಯಾವುದಾದರೂ ಸೇವಕರಿಂದ ಅತಿಥಿಗಳಿಗೆ ತೊಂದರೆ ಉಂಟಾದರೆ ಸ್ವತಃ ಕ್ಷಮೆ ಕೇಳುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದದ್ದಾಗಿ ಅವರ ಅಳಿಯ ಹೇಳುತ್ತಾರೆ: ನನಗೆ ಲೋಕದಲ್ಲಿ ಯಾರೊಂದಿಗೂ ಹಗೆಯಿಲ್ಲ. ವಕಾಲತ್ ಮಾಲ್ ತಹ್ರೀಕ್ ಜದೀದಿನ ಒಬ್ಬ ಇನ್ಸ್‌ಪೆಕ್ಟರ್ ಬರೆಯುತ್ತಾರೆ: ಅವರಿಗೆ 75 ದಿನಗಳಷ್ಟು ದೀರ್ಘಕಾಲದ ಕೇರಳ ತಮಿಳುನಾಡು ಪರ್ಯಟನೆ ಇತ್ತು. ಈ ವೇಳೆ ನಾನು ರೋಗಗ್ರಸ್ತನಾದೆನು. ತಂದೆತಾಯಂದಿರು ಶುಶ್ರೂಷೆ ಮಾಡುವ ರೀತಿಯಲ್ಲಿ ಅವರು ನನ್ನ ಶುಶ್ರೂಷೆ ಮಾಡಿದರು. ಅಲ್ಲಾಹನು ದಿವಂಗತರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಪತ್ನಿಗೂ ಸಹನೆ ಮತ್ತು ಸಮಾಧಾನ ನೀಡಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಸನ್ಮಾನ್ಯ ಮಖ್‌ಸೂದ್ ಅಹ್ಮದ್ ಭಟ್ಟಿ ಸಾಹಿಬ್‌ರದ್ದಾಗಿದೆ. ಮೇ 18ರಂದು 52ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಜಮ್ಮು ಕಾಶ್ಮೀರ ರಾಜ್ಯದ ರಾಜೋರಿ ಜಿಲ್ಲೆಯ ಚಾರ್‌ಕೋಠ್ ಜಮಾಅತಿನವರಾಗಿದ್ದರು. ಅವರ ಸೇವೆಯ ಕಾಲಾವಧಿ 30 ವರ್ಷಗಳಷ್ಟು ಆಗಿತ್ತು. ಅವರಿಗೆ ಲಕ್ನೌವಿನ ಝೋನಲ್ ಅಮೀರ್ ಆಗಿ ಮತ್ತು ಶ್ರೀನಗರದ ಮುಬಲ್ಲಿಗ್ ಇಂಚಾರ್ಜ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. 2017ರಿಂದ ನಿಧನದ ತನಕ ಫುಲ್‌ಟೈಮ್ ಮರ್ಕಝಿ ಖಾಝಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಖಝಾದಲ್ಲಿ ಕ್ರಿಯಾಶೀಲರಾಗಿ ಮತ್ತು ನಿಷ್ಠೆಯಿಂದ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಅನೇಕ ಮೊಕದ್ದಮೆಗಳ ತೀರ್ಪು ಮಾಡಿದ್ದರು. ತಮಗೆ ವಹಿಸಲಾದ ಕೆಲಸದ ಬಗ್ಗೆ ಅವರಿಗೆ ಬಹಳ ಚಿಂತೆ ಇರುತ್ತಿತ್ತು. ಕಳೆದ ಕೆಲವು ದಿನಗಳಿಂದ ಕೊರೋನ ರೋಗಪೀಡಿತರಾಗಿ ಆಸ್ಪತ್ರೆಯಲ್ಲಿದ್ದರು. ಆಸ್ಪತ್ರೆಯಲ್ಲೂ ಕೆಲಸಗಳ ಬಗ್ಗೆ ಅವರಿಗೆ ಚಿಂತೆಯಿತ್ತು. ಬಹಳ ಸ್ನೇಹಮಯಿ, ಧೈರ್ಯವಂತ, ಕ್ರಿಯಾಶೀಲ ವಖ್ಫೇ ಝಿಂದಗಿಯಾಗಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ತಾಯಿಯನ್ನು, ಮೂವರು ಸಹೋದರರನ್ನು ಅಲ್ಲದೆ ಪತ್ನಿಯನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ದಿವಂಗತರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪುತ್ರಿಯರನ್ನು ಸಂರಕ್ಷಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಫೈಸಲಾಬಾದಿನ ಜಾವೇದ್ ಇಕ್ಬಾಲ್ ಸಾಹಿಬ್‌ರದ್ದಾಗಿದೆ. 66ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮಗನಾದ ತಲ್‌ಹ ಜಾವೇದ್ ಸಾಹಿಬ್‌ರು ಬರೆಯುತ್ತಾರೆ: ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರಾದ ಬಾಬಾ ಚಕೀರರ ಮೂಲಕ ಪ್ರವೇಶಿಸಿತು. ಬೀಸುಕಲ್ಲು ನಿರ್ಮಾಣ ಮತ್ತು ಅದರ ದುರಸ್ತಿಯ ಕಾರಣದಿಂದ ಅವರ ಹೆಸರು ಪ್ರಸಿದ್ಧವಾಗಿತ್ತು. ಗಲ್ಲಿಗಳಲ್ಲಿ ಉಚ್ಚ ಸ್ವರದಲ್ಲಿ ಜನರನ್ನು ಕರೆದು ತಮ್ಮ ಕೆಲಸಮಾಡುತ್ತಿದ್ದರು. ಈ ವೇಳೆ ತಬ್ಲೀಗಿನ ಮಾರ್ಗ ತೆರೆಯುವಂತಾಗಲು ಹಝ್ರತ್ ಮಸೀಹ್ ಮೌಊದ್‌ರ ಪದ್ಯಗಳನ್ನು ಉಚ್ಚಸ್ವರದಲ್ಲಿ ಹೇಳುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಐದು ಹೊತ್ತಿನ ನಮಾಝ್‌ಗಳನ್ನಲ್ಲದೆ ತಹಜ್ಜುದ್ ನಮಾಝ್ ನಿಯತವಾಗಿ ನಿರ್ವಹಿಸುತ್ತಿದ್ದರು. ತಹಜ್ಜುದ್ ನಮಾಝ್ ನಿರ್ವಹಿಸಲು ಮನೆಯವರೊಡನೆ ಸಹ ಹೇಳುತ್ತಿದ್ದರು. ಜಮಾಅತಾಗಿ ನಮಾಝ್ ನಿರ್ವಹಿಸಲು ಉಪದೇಶಿಸುತ್ತಿದ್ದರು. ಮನೆಯಲ್ಲೂ ಜಮಾಅತಾಗಿ ನಮಾಝ್ ನಿರ್ವಹಿಸುತ್ತಿದ್ದರು. ಪವಿತ್ರ ಖುರ್‌ಆನಿನ ಪಾರಾಯಣ ನಿಯತವಾಗಿ ಮಾಡುತ್ತಿದ್ದರು. ಅದರ ತರ್ಜುಮೆ ಸಹ ಓದುತ್ತಿದ್ದರು. ಖುತ್ಬ ಕೇಳುವ ಕಡೆಗೆ ವಿಶೇಷ ಗಮನವಹಿಸುತ್ತಿದ್ದರು. ಮನೆಯವರ ಜೊತೆಗೆ ಕುಳಿತುಕೊಂಡು ಎಂ.ಟಿ.ಎ.ಯಲ್ಲಿ ಖುತ್ಬ ಕೇಳುತ್ತಿದ್ದರು. ಧಾರ್ಮಿಕ ಸೇವೆಯ ಆವೇಶ ಬಹಳವಿತ್ತು. 1984ರ ಸ್ಥಿತಿಗತಿಗಳ ನಂತರ ಜಮಾಅತಿನ ಆಡಿಯೋ ಕ್ಯಾಸೆಟ್‌ಗಳ ಮೂಲಕ ಖಲೀಫರ ಖುತ್ಬ ಜಮಾಅತುಗಳಿಗೆ ತಲುಪುತ್ತಿತ್ತು. ಕ್ಯಾಸೆಟ್‌ಗಳನ್ನು ಚೀಲದಲ್ಲಿ ಹಾಕಿಕೊಂಡು ಸೈಕಲಿನಲ್ಲಿ ಗ್ರಾಮಗಳಿಗೆ ಹೋಗಿ ತಲುಪಿಸುತ್ತಿದ್ದರು. ಎಂ.ಟಿ.ಎ. ಶುರುವಾದಾಗ, ತಮ್ಮ ಮನೆಯಲ್ಲಿ ಡಿಶ್ ಅಳವಡಿಸಿದರು. ಜನರನ್ನು ಮನೆಗೆ ಕರೆಸಿಕೊಂಡು ಖುತ್‌ಬ ಕೇಳುವಂತೆ ಮಾಡುತ್ತಿದ್ದರು. ದಿವಂಗತರು ತಾಯಿ, ಪತ್ನಿಯಾದ ಅಮತುಲ್ ಬಾಸಿತ್ ಮತ್ತು ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಗಾನದ ಮುಬಲ್ಲಿಗ್‌ರಾದ ನವಾಝ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಮದೀಹ ನವಾಝ್ ಸಾಹಿಬರದ್ದಾಗಿದೆ. ಎಪ್ರಿಲ್ 16ರಂದು 36ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಗಾನದಲ್ಲೇ ಇದ್ದರು. ಅಲ್ಲೇ ಅವರು ನಿಧನರಾದರು. ಅವರ ಗಂಡನಾದ ಮುರಬ್ಬಿ ಸಾಹಿಬ್‌ರು ಬರೆಯುತ್ತಾರೆ: ವಿವಾಹದ 16 ವರ್ಷಗಳಲ್ಲಿ ಅವರಲ್ಲಿ ಅಗಣಿತವಾದ ಸ್ವಭಾವಗುಣಗಳು ಇರುವುದಾಗಿ ನಾನು ಕಂಡೆನು. ಅತ್ಯಂತ ಧೈರ್ಯಶಾಲಿ, ಸಹನೆಯುಳ್ಳ, ಸಹಾನುಭೂತಿ ಹೊಂದಿರುವ, ತ್ಯಾಗಶಾಲಿಯಾದ ಪತ್ನಿಯಾಗಿದ್ದಳು. ಮಕ್ಕಳಿಗೆ ಅತ್ಯುತ್ತಮ ತಾಯಿ ಮತ್ತು ನಿಷ್ಠಾವಂತ ಪತ್ನಿಯಾಗಿದ್ದಳು. ಗಾನದಲ್ಲಿ ಅವಕಾಶ ಸಿಗುವಾಗಲೆಲ್ಲ ಮಕ್ಕಳಿಗೆ ಕ್ಲಾಸ್‌ಗಳನ್ನು ತೆಗೆಯುತ್ತಿದ್ದರು. ತನ್ನ ಮಕ್ಕಳನ್ನು ಜೊತೆಗೆ ಕುಳ್ಳಿರಿಸಿಕೊಂಡು ಪವಿತ್ರ ಖುರ್‌ಆನ್ ಓದಿಸುತ್ತಿದ್ದರು. ನನ್ನ ಸಂಬಂಧಿಕರೊಂದಿಗೆ ಉತ್ತಮವಾಗಿ ವರ್ತಿಸುತ್ತಿದ್ದಳು. ಯಾರಾದರೂ ಕಠಿಣವಾಗಿ ವರ್ತಿಸಿದರೆ, ಅದಕ್ಕೆ ಉತ್ತರಿಸುತ್ತಿರಲಿಲ್ಲ. ಬದಲಾಗಿ ಸಹಿಸುತ್ತಿದ್ದಳು. ನನ್ನೊಡನೆ ಸಹ ಸಹನೆದೋರಲು ಹೇಳುತ್ತಿದ್ದಳು. ದುಆ ಮಾಡಲು ಹೇಳುತ್ತಿದ್ದಳು. ಮಕ್ಕಳ ತರಬೇತಿ ವಿಷಯದಲ್ಲಿ ಸಣ್ಣ ಸಣ್ಣ ವಿಷಯದ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಖಿಲಾಫತಿನೊಂದಿಗೆ ಸಂಬಂಧ ಸ್ಥಾಪಿಸಲು ಖಿಲಾಫತಿನ ಅನುಗ್ರಹಗಳ ಬಗ್ಗೆ ಮಕ್ಕಳಿಗೆ ಹೇಳಿಕೊಡುತ್ತಿದ್ದಳು. ಬಡವರ ಸಹಾಯ ಮಾಡುವ ಸಾತ್ವಿಕ ಸ್ತ್ರೀಯಾಗಿದ್ದಳು. 13 ವರ್ಷ ಪ್ರಾಯದ ಸಫೀಹ್, 8 ವರ್ಷ ಪ್ರಾಯದ ಫೇಝಿಯ ಮತ್ತು ಒಂದು ವರ್ಷ ಪ್ರಾಯದ ಝಾರ ಎಂಬ ಮೂವರು ಮಕ್ಕಳನ್ನು ದಿವಂಗತರು ಅಗಲಿರುವರು. ಎಲ್ಲ ಮಕ್ಕಳು ವಖ್ಫೇ ನೌನಲ್ಲಿ ಇರುವರು. ಮಾಶಾ ಅಲ್ಲಾಹ್. ಅವರು ಮಕ್ಕಳ ಪರವಾಗಿ ಮಾಡಿರುವ ದುಆಗಳನ್ನು ಅಲ್ಲಾಹನು ಸ್ವೀಕರಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ, ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. **ಆಮೀನ್**

***********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಖಲೀಫರ ಸಭೆಯಲ್ಲಿ ಸಹಾಬಿಯೊರ್ವನ (ಅಬೂಝರ್) ಕಡೆ ಬೊಟ್ಟು ಮಾಡುತ್ತ ಹೇಳಿದನು. ಇವರು ನನ್ನ ಸಾಕ್ಷಿಯಾಗಿರುವರು. ಅದಾಗ್ಯೂ ಆ ಸಹಾಬಿ ಅವನಾರು ಎಂದು ಸಹ ತಿಳಿದಿರಲಿಲ್ಲ. ಆದರೆ ಕೇವಲ ಮುಸಲ್ಮಾನ ಆಗಿರುವ ಕಾರಣ ಮತ್ತು ಅವನಿಗೆ ನನ್ನ ಮೇಲೆ ಭರವಸೆ ಇದ್ದ ಕಾರಣ ಅವನ ಸಜ್ಜನಿಕೆ ನೋಡಿ ಸಾಕ್ಷಿಗೆ ನಿಲ್ಲಲು ಒಪ್ಪಿಕೊಂಡರು. ಆದರೆ ನಿಗದಿತ ಸಮಯ ಹತ್ತಿರ ಬಂತು. ಅವನು ತಲುಪಲಿಲ್ಲ ಜನರು ಹಝ್ರತ್ ಅಬೂಝರ್ ಅವರಿಗೆ ಕೇಳಿದರು. ಅವನು ಒಬ್ಬ ಮುಸಲ್ಮಾನ ಎಂದು ತಿಳಿದು ನಾನು ಅವನಿಗೆ ಸಾಕ್ಷಿಯಾಗಿದ್ದೇನೆ. ಅವನು ನನ್ನ ಮೇಲೆ ಭರವಸೆ ಹೊಂದಿದಾಗ ನಾನು ಹೇಗೆ ಅವನ ಮೇಲೆ ಭರವಸೆ ಹೊಂದದಿರಲು ಸಾಧ್ಯ. ಸಮಯ ಕೊನೆಗೊಳ್ಳುತ್ತಾ ಬಂದಾಗ ಹಝ್ರತ್ ಅಬೂಝರ್ ಅವರ ಜೀವಕ್ಕೆ ಅಪಾಯ ಉಂಟಾಯಿತು. ಆದರೆ ಅದೇ ಸಮಯಕ್ಕೆ ವ್ಯಕ್ತಿಯೊಬ್ಬನು ಅವ್ಯಹಿತವಾಗಿ ಕುದುರೆಯನ್ನು ಓಡಿಸುತ್ತಾ ಮತ್ತು ನಿತ್ರಾಣಗೊಂಡು ಬಂದು ಬಿದ್ದನು ಮತ್ತು ಹಝ್ರತ್ ಅಬೂಝರ್‌ರೊಡನೆ ಕ್ಷಮೆ ಕೋರಿದನು. ಕೆಲಸದ ಒತ್ತಡದಿಂದ ತುಂಬ ಕಷ್ಟದಿಂದ ಬರಲು ಸಾಧ್ಯವಾಯಿತು. ಮತ್ತು ನನ್ನಲ್ಲಿ ನಡುಕ ಉಂಟಾಯಿತು. ಒಂದೆಡೆ ಅಬೂಝರ್ ಅವರ ತ್ಯಾಗ, ಮತ್ತೊಂದೆಡೆ ವ್ಯಕ್ತಿಯೊಬ್ಬನ ವಚನಬದ್ಧತೆಯ ಉದಾಹರಣೆ ಇತರ ಸಮುದಾಯಗಳಲ್ಲಿ ಎಲ್ಲಿ ದೊರೆಯುತ್ತವೆ. ಈ ಘಟನೆಯನ್ನು ಬ್ರಿಟಿಷರು ತಮ್ಮ ಕಥೆಗಳಲ್ಲಿ ಮತ್ತು ಕವನಗಳಲ್ಲಿ ಅಳವಡಿಸಿಕೊಂಡಿದ್ದಾರೆ. ನಂತರ ಒಂದು ಸಂದರ್ಭದಲ್ಲಿ ಕ್ರೈಸ್ತರ ಸೈನ್ಯವು ತಾತ್ಕಾಲಿಕವಾಗಿ ಪ್ರಭುತ್ವ ಸಾಧಿಸಿತು. ಇಸ್ಲಾಮಿ ಸೈನ್ಯವನ್ನು ಕೆಲ ಕ್ಷೇತ್ರಗಳನ್ನು ಬಿಟ್ಟುಕೊಡಬೇಕಾಯಿತು. ಆ ಸಮಯ ಹಝ್ರತ್ ಉಮರ್(ರ) ಅವರ ಆಜ್ಞೆಯ ಪ್ರಕಾರ ಮುಸಲ್ಮಾನರು ಆ ಕ್ಷೇತ್ರದವರಿಂದ ವಸೂಲಿ ಮಾಡಿದ ತೆರಿಗೆ ಮರಳಿಕೊಟ್ಟರು. ನಾವು ನಿಮ್ಮ ರಕ್ಷಣೆ ಮಾಡಲು ಸಾಧ್ಯವಾಗದಾಗ ನಾವು ನಿಮ್ಮ ತೆರಿಗೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಈ ಕ್ಷೇತ್ರವು ಸಹ ಕ್ರೈಸ್ತರಿಂದ ತುಂಬಿತ್ತು. ಅವರ ಸಹಧರ್ಮಿಗಳು ವಿಜಯಸಾಧಿಸಿ ಬರುತ್ತಿದ್ದರು. ಆದರೂ ಸಹ ಅವರು ಮುಸಲ್ಮಾನರ ಪ್ರಮಾಣಿಕತೆಯಿಂದ ಎಷ್ಟೊಂದು ಪ್ರಭಾವಿತಗೊಂಡಿದ್ದರೆಂದರೆ ಪುರುಷರು, ಸ್ತ್ರೀಯರು ಅಳುತ್ತಾ ಅವರಿಗೆ ವಿದಾಯ ಕೋರಲು ನಗರದ ಹೊರಗಡೆ ತನಕ ಬಂದಿದ್ದರು ಮತ್ತು ಹೇಳುತ್ತಿದ್ದರು. ಒಂದು ವೇಳೆ ನಿಮ್ಮ ಜಾಗದಲ್ಲಿ ಕ್ರೈಸ್ತ ಸೈನ್ಯವಿರುತ್ತಿದ್ದರೆ ತೆರಿಗೆ ಹಣ ವಾಪಾಸ್ಸು ಕೊಡುವುದು ಒಂದೆಡೆ ಇರಲಿ, ಇದ್ದೂ ಇಲ್ಲದ ನಮ್ಮ ಸಂಪತ್ತು ಸಹ ಲೂಟಿ ಮಾಡಿಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾ ಅಲ್ಲಾಹನು ನಿಮ್ಮನ್ನು ಮತ್ತೇ ಮರಳಿ ತರಲಿ ಎಂದು ಪ್ರಾರ್ಥಿಸುತ್ತಿದ್ದರು.

ಅಕಟಕಟಾ! ಆ ಕಾಲಘಟ್ಟ ಎಲ್ಲಿ ಮತ್ತು ಈಗ ಮುಸಲ್ಮಾನರನ್ನು ಎಲ್ಲರಿಗಿಂತ ಅಧಿಕ ವಂಚಕರು ಎಂದು ಭಾವಿಸುತ್ತಾರೆ. ಉಲಮಾಅಗಳು ಅನ್ಯಧರ್ಮಿಯರ ಸಂಪತ್ತನ್ನು ಲೂಟಿ ಮಾಡಲು ಫತ್ವಾ ನೀಡಿದ್ದಾರೆ. ಅನ್ಯ ಧರ್ಮಿಯರ ಸರಕಾರದ ವಿರುದ್ಧ ದ್ರೋಹ ಬಗೆಯುವುದು ಧರ್ಮವೆಂದು ತಿಳಿದುಕೊಂಡಿದ್ದಾರೆ. ಅಮುಸ್ಲಿಮರ ಹತ್ಯೆಯನ್ನು ಮಾಡಿದರೆ ಪುಣ್ಯವೆಂದು ಭಾವಿಸುತ್ತಾರೆ. ಎಲ್ಲಾ ಆ ಮುಸಲ್ಮಾನರು ಹೆಮ್ಮೆಪಡುತ್ತಿದ್ದ ಪುಣ್ಯಕಾರ್ಯಗಳು ಇಂದು ಗೌಣವಾಗಿವೆ.

ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್! ಅಕಟಾ! ಅಹ್ಮದಿಯಾ ಜಮಾಅತಿನವರು ಈ ಹೊಣೆಯನ್ನು ಅರಿತುಕೊಳ್ಳುವವರಾಗಲಿ, ಮತ್ತು ಇಸ್ಲಾಂ ಧರ್ಮದ ಕಳೆದು ಹೊದ ಗೌರವ ಮತ್ತೆ ಮರಳಿ ತರುವಂತಾಗಲಿ ಮತ್ತು ಮುಹಮ್ಮದ್ ರಸೂಲುಲ್ಲಾಹ್ (ಸ) ರವರ ಅದೇ ನೈತಿಕ ಮಟ್ಟ ಲೋಕವು ಅವರ ಅನುಯಾಯಿಗಳಲ್ಲಿ ಕಾಣುವಂತಾಗಲಿ, ಅದನ್ನು ನೋಡಿದರೆ ಮನುಷ್ಯನಿಗೆ ದೇವರನ್ನು ಕಾಣುವಂತಾಗುವುದು. ಅವರು ಪ್ರಾಮಾಣಿಕರಾಗಲಿ, ಎಂತಹ ಪ್ರಮಾಣಿಕರೆಂದರೆ, ಸ್ವಯಂ ಹಸಿವಿನಿಂದ ಸತ್ತರು, ಪತ್ನಿ, ಮಕ್ಕಳು ಹಸಿವಿನಿಂದ ಸತ್ತರೂ ಇತರರ ಅಮಾನತನ್ನು ದೋಚುವವರಾಗಬಾರದು. ಸತ್ಯವಂತರಾಗಲಿ, ಎಂತಹ ಸತ್ಯವಂತರೆಂದರೆ ಜೀವ ಹೋದರೂ, ಹಣ ಸಂಪತ್ತು ಹೋದರೂ, ಅಧಿಕಾರ ಹೋದರೂ ಸುಳ್ಳಿನ ಒಂದು ಶಬ್ದವು ನಾಲಿಗೆಯ ಮೇಲೆ ಬರಬಾರದು ಭರವಸೆ ನೀಡಿದರೆ ಪ್ರಾಣ ಕೊಟ್ಟಾದರೂ ಅದನ್ನು ನಿಭಾಯಿಸಬೇಕು. ಮತ್ತು ತಮ್ಮ ನಿಶ್ಚಯಗಳನ್ನು ಪ್ರಾಣದ ಹಂಗು ತೊರೆದು ಪೂರ್ಣಗಳಿಸುವವರಾಗಬೆಕು.

**(ತಫ್ಸೀರ್ ಕಬೀರ್ ಸಂ 3, ಪುಟ 440, ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಒಂದು ಸಾವಿರ ರೂಪಾಯಿಯ ಬಹುಮಾನ ಘೋಷಿಸಿದರು. ಅವರು ಹೇಳಿದರು. ಒಂದು ವೇಳೆ ಕ್ರೈಸ್ತ ಬಾಂಧವರು ಇನ್ನೂ ಸಹ ಜಗಳ ಮುಂದುವರೆಸುವುದಾದರೆ ಮತ್ತು ತಮ್ಮ ಕುತಂತ್ರಗಳಿಗೇ ಬೆಲೆ ಕೊಡುವುದಾದರೆ, ಅಥವಾ ವ್ಯಕ್ತಿಯೊಬ್ಬನು ಇಸ್ಲಾಮಿನ ವಿಜಯವಾಯಿತು. ಅದು ನಿಜವಾಗಿಯೂ ವಿಜಯ ಸಾಧಿಸಿದೆ ಅಥವಾ ಕ್ರೈಸ್ತರು ವಿಜಯ ಸಾಧಿಸಿದ್ದಾರೆ, ಎಂದು ಅವರು ಭಾವಿಸಿಕೊಂಡಿದ್ದರೆ. ಆ ರೀತಿಯ ಸಂಶಯಗಳಿದ್ದರೆ ನಾನು ಅವರ ಸಮಾಧಾನಕ್ಕಾಗಿ "ಮುಬಾಹಲಕ್ಕೆ" ಸಿದ್ಧನಿದ್ದೇನೆ. ಅವರು ಮೋಸಗಾರಕೆಯಿಂದ ಮತ್ತು ಕುತಂತ್ರಗಳಿಂದ ದೂರ ಸರಿಯಲಿಲ್ಲವೆಂದರೆ ಮುಬಾಹಲ ಆಗುವ ರೀತಿ ಹೀಗಿರುವುದು. ಒಂದು ತಾರೀಖನ್ನು ನಿಗದಿಪಡಿಸಿ ನಮ್ಮಿಬ್ಬರ ಪಕ್ಷದವರು ಒಂದು ಮೈದಾನದಲ್ಲಿ ಹಾಜರಾಗುವೆವು ಶ್ರೀ ಅಬ್ದುಲ್ಲ ಆಥಮರು ನಿಂತುಕೊಂಡು ಮೂರು ಸಲ ಈ ಪದಗಳನ್ನು ಉಚ್ಚರಿಸಬೇಕು. ಈ ಭವಿಷ್ಯವಾಣಿಯ ಅವಧಿಯಲ್ಲಿ ಇಸ್ಲಾಮಿ ಭಯವು ಒಂದು ಕ್ಷಣಕ್ಕಾದರೂ ನನ್ನ ಮನಸ್ಸಿನಲ್ಲಿ ಉಂಟಾಗಲಿಲ್ಲ ಮತ್ತು ನಾನು ಇಸ್ಲಾಮ್ ಹಾಗೂ ಇಸ್ಲಾಮಿನ ನಬಿ(ಸ) ಅವರನ್ನು ಅಸತ್ಯವಾದಿ ಎಂದೆ ತಿಳಿದಿರುತ್ತೇನೆ. ಅವರ ಸತ್ಯತೆ ಊಹಿಸಲು ಇರಲಿಲ್ಲ. ಮತ್ತು ಹಝ್ರತ್ ಈಸಾ(ಅ) ಅವರ ಸ್ಥಿತಿ ಮತ್ತು ದೇವತ್ವದ ದೃಢ ವಿಶ್ವಾಸ ಹೊಂದಿದ್ದೆ ಮತ್ತು ಹೊಂದಿರುತ್ತೇನೆ. ಪ್ರೋಟೆಸ್ಟಂಟ್ ಕ್ರೈಸ್ತರಂತೆಯೇ ನನ್ನ ದೃಢ ವಿಶ್ವಾಸವಿದೆ. ನಾನು ಅದರ ತದ್ವಿರುದ್ಧ ಏನಾದರೂ ಹೇಳಿದ್ದರೆ ಮತ್ತು ಸತ್ಯವನ್ನು ಮರೆ ಮಾಚಿದ್ದರೆ ಓ ಸರ್ವಶಕ್ತನಾದ ಅಲ್ಲಾಹನೆ ನನಗೆ ಒಂದು ವರ್ಷದಲ್ಲಿ ಮರಣದ ಶಿಕ್ಷೆಯನ್ನು ವಿಧಿಸು. ಈ ದುಆ ಮೇಲೆ ನಾವು ಆಮೀನ್ ಎಂದು ಹೇಳುವೆವು. ಈ ದುಆದ ಪ್ರಭಾವ ಒಂದು ವರ್ಷದವರೆಗೆ ಆಗಲಿಲ್ಲ ಮತ್ತು ಮಿಥ್ಯವಾದಿಗಳ ಮೇಲೆ ಅವತರಿಸುವಂತಹ ಶಿಕ್ಷೆ ಅವತರಿಸಲಿಲ್ಲ ಎಂದಾದರೆ ನಾವು ಒಂದು ಸಾವಿರ ಶ್ರೀ ಅಬ್ದುಲ್ಲ ಆಥಮರಿಗೆ ದಂಡ ರೂಪದಲ್ಲಿ ಕೊಡುವೆವು. ಅವರು ಬಯಸುವುದಾದರೆ ಮೊದಲೇ ಯಾವ ಸ್ಥಳದಲ್ಲಾದರೂ ಜಮೆ ಮಾಡಿಸಿಕೊಳ್ಳಬಹುದು. ಹೀಗೆ ನೀವು ಮಾಡಲಿಲ್ಲ ಎಂದಾದರೆ ನಿಶ್ಚಯವಾಗಿ ತಿಳಿದುಕೊಳ್ಳಿರಿ. ನೀವು ಸುಳ್ಳುಗಾರರು. ಪ್ರಸಂಗ ಮೀರಿ ವರ್ತಿಸಿದ್ದಕ್ಕೆ ಶಿಕ್ಷೆ ಪಡೆಯುವಿರಿ. ನಮಗೆ ಸುಸ್ಪಷ್ಟವಾಗಿ ದಿವ್ಯವಾಣಿಯಿಂದ ತಿಳಿದುಬಂದಿದೆ. ಆ ಸಮಯ ಮರಣದ ಶಿಕ್ಷೆಯಿಂದ ಉಳಿದಿರುವ ಕಾರಣ ಅಬ್ದುಲ್ಲ ಆಥಮರು ಸತ್ಯದ ಗೌರವವನ್ನು ತನ್ನ ಭಯಂಕರ ಸ್ಥಿತಿಯಿಂದಾಗಿ ಒಪ್ಪಿಕೊಂಡು ಸತ್ಯದೆಡೆ ವಿಧಿಸಲಾದ ಶರತ್ತಿನ ಅನ್ವಯ ಪ್ರಯೋಜನ ಸಿಗಬಹುದಾಗಿತ್ತು. ಅವರ ಅವಸ್ಥೆಗಳನ್ನು ತಿಳಿದವರು ಸರಿಯಾಗಿ ಬಲ್ಲರು. ಅವರು ಅನುಭವಿಸಿದ ಯಾತನೆಗಳನ್ನು ತುಲನೆ ಮಾಡಿ ನೋಡಲಿ ಮತ್ತು ಹೇಳಲಿ ಅದು ನರಕ ಸಮಾನವಾಗಿರುತ್ತದೆ ಅಥವಾ ಇಲ್ಲ. ಇನ್ನೂ ಯಾರಾದರೂ ಸತ್ಯವನ್ನು ನಿರಾಕರಿಸುವವರಾದರೆ ಅವರಿಗೆ ತಿಳಿಸಲು ನಾನು ಬರೆದ ತೀರ್ಪು ಅಂತಿಮವಾಗಿದೆ. "ತಾಸಿಯ ರೂವೆ ಶವದ್ ಹರ್ ಕ ದರೋಗಶ್ ಬಾಶ್‌ದ್ (ಅದೇ ಪುಟ 6)

**ಅಬ್ದುಲ್ಲ ಆಥಮರು ಸತ್ಯವಂತರಾಗಿದ್ದರೆ ಸಿದ್ಧಪುರುಷರಾಗಿ ಮೈದನಕ್ಕಿಳಿದು ಉಚ್ಚರಿಸಲಿ. ನಾನು ಇಸ್ಲಾಮಿ ಭವಿಷ್ಯವಾಣಿಯಿಂದ ಭಯಗೊಂಡಿಲ್ಲ."**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ನಾವು ತಮ್ಮ ವಿಜಯದ ಅಂತಿಮ ತೀರ್ಪು ಪ್ರಕಟಿಸಲು ಮತ್ತು ಇಡೀ ಲೋಕಕ್ಕೆ ಹೇಗೆ ನಮಗೆ ಈ ವಿಜಯ ದೊರಕಿದೆ ಎಂದು ತೋರ್ಪಡಿಸಲು ಸರಳವಾದ ಮತ್ತು ಉಪಯುಕ್ತ ತೀರ್ಪು ಪ್ರಸ್ತುತಪಡಿಸುತ್ತೇವೆ. ಶ್ರೀ ಅಬ್ದುಲ್ಲ ಆಥಮ್ ಸಾಹಿಬರ ದೃಷ್ಟಿಯಲ್ಲಿ ನಮ್ಮ ಈ ಹೇಳಿಕೆ ಅಪ್ಪಟ ಸುಳ್ಳು ಮತ್ತು ವಂಚಿಸುವಂತಿದ್ದರೆ ಅವರು ಸಿದ್ಧಪುರುಷರಾಗಿ ಬಂದು ಈ ಜಾಹೀರಾತು ಪ್ರಕಟವಾಗುವ ಒಂದು ವಾರ ಮುಂಚಿತವಾಗಿ ನಾವು ವಿವರಿಸಿದ ಸಲಹೆಯನ್ನು ಸ್ವೀಕರಿಸಿ ನಮಗೆ ಸೂಚಿಸಲಿ. ಆ ಸಲಹೆ ಏನೆಂದರೆ ಒಂದು ವೇಳೆ ಈ 15 ತಿಂಗಳುಗಳ ಅವಧಿಯಲ್ಲಿ ಎಂದೂ ಅವರಿಗೆ ಇಸ್ಲಾಮಿನ ಸತ್ಯದ ಭಯ ಅವರ ಹೃದಯವನ್ನು ತಟ್ಟಲಿಲ್ಲ. ಅದರ ಪ್ರಭಾವ ಬೀರಲಿಲ್ಲ. ಅದರ ಗೌರವ, ಸತ್ಯತೆ, ದಿವ್ಯವಾಣಿ ದುಃಖಕ್ಕೆ ಗುರಿಮಾಡಲಿಲ್ಲ. ಅಲ್ಲಾಹನೊಡನೆ ಅವನ ಏಕತ್ವ ಮನದಲ್ಲಿ ಸ್ವೀಕರಿಸಲಿಲ್ಲ. ಈ ಇಸ್ಲಾಮಿ ಭವಿಷ್ಯವಾಣಿಯಿಂದ ಕಿಂಚಿತ್ತೂ ಅವನ ಮನದಲ್ಲಿ ಭಯ ಉಂಟಾಗಲಿಲ್ಲ. ತ್ರೀತ್ವ ವಿಶ್ವಾಸದಿಂದ ಸ್ವಲ್ಪವೂ ಅಲುಗಾಡಲಿಲ್ಲ ಎಂದಾದರೆ ಉಭಯತ್ರ ಜಮಾಅತಿನ ಸಮಕ್ಷಮ ಮೂರು ಸಲ ಈ ಮಾತುಗಳನ್ನು ನಿರಾಕರಿಸಲಿ, ನಾನು ಖಂಡಿತವಾಗಿಯೂ ಹೀಗೆ ಮಾಡಲಿಲ್ಲ. ಕಿಂಚಿತ್ತೂ ಒಂದು ಕ್ಷಣವಾದರೂ ಇಸ್ಲಾಮಿನ ಗೌರವ ನನ್ನ ಮನಸ್ಸಿಗೆ ಮುಟ್ಟಲಿಲ್ಲ. ಮತ್ತು ನಾನು ಮಸೀಹನು ದೇವಪುತ್ರ ಮತ್ತು ದೇವನೆಂಬ ವಿಶ್ವಾಸ ದೃಢವಾಗಿತ್ತು. ಅದನ್ನು ಮನಸಾರೆ ಒಪ್ಪಿದ್ದೆ ಮತ್ತು ಇಸ್ಲಾಮಿನ ಶತ್ರುವಾಗಿದ್ದೆ. ಇದನ್ನು ನಾನು ಸುಳ್ಳು ಹೇಳುವವನಾದರೆ ನನ್ನ ಮೇಲೆ ಒಂದು ವರ್ಷದೊಳಗೆ ಅಪಮಾನಜನಕ ಸಾವು ಮತ್ತು ವಿನಾಶ ಉಂಟಾಗಲಿ. ಅದರಿಂದ ಜನರ ಮೇಲೆ ಸತ್ಯ ಸ್ಪಷ್ಟವಾಗುವುದು. ಶ್ರೀ ಆಥಮ್ ಸಾಹಿಬರು ಅದನ್ನು ಒಪ್ಪಿಕೊಂಡು ಉಚ್ಚರಿಸಿದರೆ ಪ್ರತಿ ಸಲ ಅವರ ಉಚ್ಚಾರಕ್ಕೆ ನಮ್ಮ ಜಮಾಅತ್ ಆಮೀನ್ ಎಂದು ಹೇಳುವುದು. ಆಗ ಅದೇ ಸಮಯ ಒಂದು ಸಾವಿರ ರೂಪಾಯಿಯ ಕೈ ಚೀಲ ಕ್ರಮಬದ್ಧ ರೀತಿಯಲ್ಲಿ ಸಾಕ್ಷಿಗಳೊಂದಿಗೆ ಅವರಿಗೆ ಕೊಡಲಾಗುವುದು. ಈ ಸಾಕ್ಷಿ ನಾನು ಡಾ॥ ಮಾರ್ಟಿನ್ ಕ್ಲಾರ್ಕ್ ಮತ್ತು ಪಾದರಿ ಇಮಾಮುದ್ದೀನ್‌ರವರ ಬಳಿ ಠೇವಣಿ

ರೂಪದಲ್ಲಿರುವುದು. ಆ ಸಾಕ್ಷಿ ಪತ್ರದ ಬರಹ ಹೀಗಿರುವುದು. ಈ ಸಾವಿರ ರೂಪಾಯಿಯು ಅಮಾನತ್ ರೂಪದಲ್ಲಿ ಶ್ರೀ ಅಬ್ದುಲ್ಲ ಆಥಮ್ ಸಾಹಿಬರ ಬಳಿ ಇಡಲಾಗಿದೆ. ಅವರು ಅವರ ಹೇಳಿಕೆಯ ಪ್ರಕಾರ ಒಂದು ವರ್ಷದೊಳಗೆ ತೀರಿ ಹೋದರೆ ಈ ರೂಪಾಯಿಗಳನ್ನು ನಾವಿಬ್ಬರೂ ತಡಮಾಡದೇ ಮರಳಿ ಕೊಡುವೆವು. ಮರಳಿಸಲು ಯಾವ ತಕರಾರು ಇರುವುದಿಲ್ಲ.

ಇಂಗ್ಲೀಷ್ ತಿಂಗಳುಗಳ ಪ್ರಕಾರ ಒಂದು ವರ್ಷದೊಳಗೆ ತೀರಿಹೋಗಲಿಲ್ಲವೆಂದರೆ ಈ ರೂಪಾಯಿಗಳು ಅವರ ಆಸ್ತಿಯಾಗುವುದು ಮತ್ತು ಅದು ಅವರ ವಿಜಯದ ಸಂಕೇತವಾಗಿರುವುದು. ನಾವು ರಿಜಿಸ್ಟ್ರರ್ ಮೂಲಕ ಕಳುಹಿಸಿದ ಜಾಹೀರಾತು ಅದು ಆಥಮ್ ಸಾಹಿಬ್ ಮತ್ತು ಡಾ॥ ಮಾರ್ಟಿನ್ ಕ್ಲಾರ್ಕ್ ಸಾಹಿಬರ ಹೆಸರಿನಲ್ಲಿದೆ ವಸೂಲು ಮಾಡಿದ ಒಂದು ವಾರದವರೆಗೆ ಅವರು ಈ ಆಹ್ವಾನ ಒಪ್ಪಲು ಅರ್ಜಿ ಕಳುಹಿಸಲಿಲ್ಲ ಎಂದಾದರೆ ಇಸ್ಲಾಮಿನ ವಿಜಯದ ಮೇಲೆ ಸ್ವಯಂ ಮುದ್ರೆ ಒತ್ತಿದಂತಾಗುವುದು. ಮತ್ತು ನಮ್ಮ ಭವಿಷ್ಯವಾಣಿಯ ಸತ್ಯತೆಯನ್ನು ಒಪ್ಪಿಕೊಳ್ಳುವಂತಾಗುವುದು. ಅಲ್ಲಾಹನು ಈ ತೀರ್ಪು ನನ್ನ ಸಜ್ಜನ ದಾಸರ ಸತ್ಯತೆಯನ್ನು ಪ್ರಕಟಪಡಿಸಲು ನೀಡುವನು ಮತ್ತು ಸುಳ್ಳುವಾದಿಗಳ ಯೋಜನೆಗಳನ್ನು ನಾಶಗೊಳಿಸುವನು ಮತ್ತು ಮೋಸಗಾರರ ಮೂರ್ತಿಯನ್ನು ಛಿದ್ರಗೊಳಿಸುವನು. (ಅದೇ ಪುಟ 50).

**ಅಬ್ದುಲ್ಲ ಆಥಮ್ ಬಯಸಿದರೆ ನಾವು ಖುದ್ದಾಗಿ ಸಾವಿರ ರೂಪಾಯಿ ಸಹಿತ ಅಮೃತ್ಸರಕ್ಕೆ ಹಾಜರಾಗುವೆವು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ಖುರ್‌ಆನ್‌ನ ನಂತರ ನಾವು ಆಥಮ್ ಸಾಹೇಬರಿಗೆ ಅಮೃತ್ಸರದಲ್ಲಿ ನಮ್ಮ ಮನೆಗೆ ಬರುವ ಕಷ್ಟ ಕೊಡುವುದಿಲ್ಲ. ಬದಲು ನಾವು ಅವರ ಕರೆಯ ಮೇರೆಗೆ ಸಾವಿರ ರೂಪಾಯಿ ಸಹಿತ ನಿಮ್ಮ ಮನೆಗೆ ಬರುವೆವು. ಅವರು ಕರೆದ ತಾರೀಖಿಗೆ ಬರಲು ನಮಗೆ ಮೂರು ವಾರಗಳ ಅವಕಾಶ ಕೊಡಬೇಕು. ಅದರೊಳಗೆ ಯಾವುದೇ ತಾರೀಖಿಗೆ ರೂಪಾಯಿಗಳ ಸಹಿತ ತಮ್ಮ ಜಮಾಅತಿನೊಂದಿಗೆ ಹಾಜರಾಗುವೆವು. ನಮಗೆ ಕರೆ ನೀಡಲು ಅವರಿಗೆ ರಿಜಿಸ್ಟ್ರರ್ ಸಹಿ ಮಾಡಿದ ಪತ್ರ ಕಳುಹಿಸುವುದು ಅನಿವಾರ್ಯವಾಗುವುದು. ಮತ್ತೆ ನಾವು ಮಾಹಿತಿ ಪಡೆದು ಮೂರು ವಾರಗಳ ಒಳಗೆ ರೂಪಾಯಿಗಳ ಸಹಿತ ಹಾಜರಾಗದಿದ್ದರೆ ನಿಸ್ಸಂಶಯವಾಗಿಯೂ ನಾವು ಸುಳ್ಳುಗಾರರಾದೆವು. ನಾವು ಸ್ವಯಂ ಅವರ ಮನೆಗೆ ಬರುವೆವು. ಅವರು ಯಾವುದೇ ರೀತಿಯ ಕಷ್ಟಪಡುವುದು ಬೇಡ. ನಾವು ಅವರಿಗೆ ನಿಂತುಕೊಳ್ಳುವ, ಕುಳಿತುಕೊಳ್ಳುವ ಕಷ್ಟ ಸಹ ಕೊಡಬಯಸುವುದಿಲ್ಲ. ಅವರು ಸಂತೋಷದಿಂದ ಹಾಸಿಗೆಯ ಮೇಲೆ ಮಲಗಿಕೊಂಡಿರಲಿ. ಆದರೆ ನಾವು ಬರೆದುಕೊಟ್ಟ ವಿಷಯ ಒಪ್ಪಿಕೊಂಡರೆ ಸಾಕು.

ನಾವು ಓದುಗರಿಗೆ ಮತ್ತೊಮ್ಮೆ ನೆನಪಿಸಿ ಕೊಡಬಯಸುತ್ತೇವೆ. ಶ್ರೀ ಆಥಮ್ ಸಾಹೇಬರ ಪೈಕಿ ಮಾಡಲಾದ ನಮ್ಮ ಭವಿಷ್ಯವಾಣಿ ಎರಡು ಮಜಲುಗಳನ್ನು ಒಳಗೊಂಡಿತ್ತು. ಅಂದರೆ ಒಂದು ಅವರು ಮರಣ ಹೊಂದಬೇಕು. ಅಥವಾ ಸತ್ಯದೆಡೆ ಬರಬೇಕು. ರುಜುಪಡಿಸಿಕೊಳ್ಳುವ ಹೃದಯಕ್ಕೆ ಸಂಬಂಧಿಸಿದ ಮಾತಾಗಿದೆ. ಅದನ್ನು ಜನರು ನೋಡಲು ಸಾಧ್ಯವಾಗುವುದಿಲ್ಲ. ಅಲ್ಲಾಹನು ಬಲ್ಲವನಾಗಿದ್ದಾನೆ. ಜನರು ಸಹ ತಿಳಿಯುವಂತಾಗಬೇಕು ಎಂಬ ವಿಷಯಕ್ಕೆ ಈ ನಿರ್ಣಯ ನಾವು ತೆಗೆದುಕೊಂಡಿದ್ದೇವೆ. (ಅದೇ ಪುಟ 58).

**ಕ್ರೈಸ್ತರು ಹೇಳುತ್ತಾರೆ. ದೇವನಾದ ಮಸೀಹನು ಶ್ರೀ ಅಬ್ದುಲ್ಲ ಆಥಮನನ್ನು ರಕ್ಷಿಸಿದನು. ನಿಜವಾಗಿಯೂ ದೇವರಾದ ಮಸೀಹನು ರಕ್ಷಿಸಿದನು ಎಂದಾದರೆ ಈಗಲೂ ರಕ್ಷಿಸಬಹುದು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಮೃತ್ಸರದ ಕ್ರೈಸ್ತರು ತಮ್ಮ ಜಾಹೀರಾತಿನಲ್ಲಿ ಬರೆದಿದ್ದಾರೆ. ಶ್ರೀ ಆಥಮನಿಗೆ ದೇವನಾದ ಮಸೀಹನು ರಕ್ಷಿಸಿದನು. ಅಂದ ಹಾಗೆ ಅದನ್ನು ಅವರು ಸತ್ಯವೆಂದು ತಿಳಿದುಕೊಂಡಿದ್ದರೆ, ಇನ್ನೇಕೆ ಧೈರ್ಯ ಬಿಡುವುದು. ಈಗ ಅವರ ಕರ್ತವ್ಯವಾಗಿದೆ. ಅವರ ಕೃತಕ ದೇವನು ನಿಜವಾಗಿಯೂ ರಕ್ಷಿಸಲು ಶಕ್ತನಾಗಿದ್ದಾನೆಂದರೆ ಅವರನ್ನು ಈ ಅಂತಿಮ ತೀರ್ಪಿನಲ್ಲೂ ರಕ್ಷಿಸುವನು. ಏಕೆಂದರೆ ಸಾವು ಬಂದರೆ ಎಲ್ಲಾ ಕ್ರೈಸ್ತರ ಮುಖಭಂಗವಾಗುವುದು. ತಮ್ಮ ಕೃತಕ ದೇವನ ಮೇಲೆ ಭರವಸೆಯಿಟ್ಟು ಬೆನ್ನು ತೋರಿಸಬಾರದಾಗಿದೆ. ಆದರೆ ನೆನಪಿರಲಿ, ಖಂಡಿತವಾಗಿಯೂ ನಿಮಗೆ ವಿಜಯ ದೊರಕದು. ಸ್ವಯಂ ಮೃತ ಹೊಂದಿದವನು ಇನ್ನೊಬ್ಬನನ್ನು ಹೇಗೆ ತಾನೇ ಮೃತ್ಯುವಿನಿಂದ ತಡೆಯಲು ಸಾಧ್ಯ. ತಡೆಯುವವನು ಒಬ್ಬನು ಮಾತ್ರ. ಅವನು ಹಯ್ಯ ಖಯ್ಯೂಮ್ ಆಗಿದ್ದಾನೆ. ನಾವು ಅವನ ಉಪಾಸಕರಾಗಿದ್ದೇವೆ. (ಅದೇ ಪುಟ 59).

**ಯಾವನೋ ಒಬ್ಬ ವಿರೋಧಿಯಾದ ಮುಸ್ಲಿಮನಾಗಲಿ, ಹಿಂದೂ ಅಥವಾ ಆರ್ಯ, ಸಂಶಯವಿದ್ದರೆ ಆಥಮನಿಗೆ ಆಣೆವಹಿಸಲು ಹೇಳಲಿ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಂತಿಮವಾಗಿ ನಾವು ಇದು ಸಹ ಬರೆಯುತ್ತೇವೆ. ಇದೀಗ ಯಾವನೊ ಒಬ್ಬ ವಿರೋಧಿಯಾದ ಮೌಲ್ವಿ ತನ್ನ ದುರಾದೃಷ್ಟದಿಂದ ಕ್ರೈಸ್ತಮತದ ಸಹಾಯಕನಾಗಿದ್ದರೆ ಅಥವಾ ಕ್ರೈಸ್ತ ಅಥವಾ ಹಿಂದೂ ಅಥವಾ ಆರ್ಯ. ನಮ್ಮ ನಿರ್ಣಾಯಕ ವಿಜಯ ಒಪ್ಪುವುದಾದರೆ ಅವನಿಗಿರುವ ಮಾರ್ಗವೆಂದರೆ. ಶ್ರೀ ಅಬ್ದುಲ್ಲ ಆಥಮರಿಗೆ ತಡಮಾಡದೇ ಆಣೆವಹಿಸಲು ಪ್ರೇರೇಪಿಸಲಿ ಮತ್ತು ಸಾವಿರ ರೂಪಾಯಿ ನಗದು ಅವರಿಗೆ ಕೊಡಿಸಲಿ. ಅದನ್ನು ಕೊಡಲು, ಅವರು ಆಣೆ ವಹಿಸಿಕೊಂಡರೆ ಒಂದು ನಿಮಿಷಕ್ಕೂ ಸಹ ತಮ್ಮ ವಾಗ್ದಾನ ಈಡೇರಿಸಲು ತಡ ಮಾಡಡಿಯೋ, ಹಾಗೆ ಮಾಡದೇ ಕೇವಲ ಗುಂಡಾಗಳ ಹಾಗೆ, ಚಿಲ್ಲರೆ ಮನುಷ್ಯರ ಹಾಗೆ ಅಪಹಾಸ್ಯ ಮಾಡುತ್ತಾ ತಿರುಗಾಡಿದರೆ ಅದು ಸಜ್ಜನರ ಕೆಲಸವಲ್ಲ. ಬದಲು ಅವರ ಸ್ವಭಾವದಲ್ಲೇ ಏನೋ ಕೊರತೆ ಇದೆ. ಅಂದ ಹಾಗೆ ಏನೋ ಯೋಚಿಸದೇ ಸತ್ಯಶೋಧನೆ ನಡೆಸದೇ ನಿರಾಕರಿಸಿದರೆ ಅದು ಮಿಥ್ಯವಾದಿಗಳ ಕೆಲಸವಾಗಿದೆ. ಅವರು "ಲಅನತುಲ್ಲಾಹಿ ಅಲಲ್‌ಕಾಝಿಬೀನ್" ಗೆ ಅರ್ಹರಾಗಿದ್ದಾರೆ. (ಅದೇ ಪುಟ 60).

**ಆಥಮನ ಬಳಿ ಹೋಗಲಿಕ್ಕೆ ರಿಕ್ಷಾ, ಕುದುರೆ ಅಥವಾ ಡೋಲಿ ಮತ್ತು ಆಹಾರದ ಖರ್ಚು ಬೇಕಾದರೆ ನಾವು ಕೊಡುವೆವು.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಯಾರಾದರೂ ಶ್ರೀ ಅಬ್ದುಲ್ಲ ಆಥಮರ ಬಳಿ ಹೋಗಲು, ಅವರಿಗೆ ದೂರ ಹೋಗಬೇಕಾಗುತ್ತದೆ ಎಂದರೆ ನಾವು ವಾಗ್ದಾನ ಮಾಡುತ್ತೇವೆ. ನಾವು ತಮ್ಮ ಖರ್ಚಿನ ಮೇಲೆ ರಿಕ್ಷಾ, ಕುದುರೆ ಅಥವಾ ಡೋಲಿ ಒದಗಿಸುವೆವು. ಅವರು ಹಿಂದೂ ಆಗಲಿ, ಸಿಖ್‌ರಾಗಲಿ ಅಥವಾ ಯಾವುದೇ ಅನ್ಯಧರ್ಮಿಯವರಾಗಲಿ ಅವರ ಆಹಾರ ಖರ್ಚು ಸಹ ನಾವು ನಗದು ರೂಪದಲ್ಲಿ ಕೊಡುವೆವು. ಇದು ಸರಳವಾದ ನಿರ್ಣಯವಾಗಿದೆ. ಅದನ್ನೆಲ್ಲ ತೊರೆದು ಏನು ರಿಯಾಯಿತು ನೀಡದೇ ನಮ್ಮನ್ನು ಸುಳ್ಳುಗಾರ ಮತ್ತು ಪರಾಜಿತರಾದವರು ಎನ್ನುವುದು ಅಥವಾ ಅಪಹಾಸ್ಯ ಮಾಡುತ್ತಾ ಪೇಟೆಯಲ್ಲಿ ತಿರುಗಾಡುವುದು ಧರ್ಮ ನಿಷ್ಠರ ಕಾರ್ಯವಲ್ಲ. (ಅದೇ ಪುಟ 61).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಆಥಮನಿಗೆ ಒಂದು ಸಾವಿರ, ನಂತರ ಎರಡು ಸಾವಿರದ ಬಹುಮಾನ ನಿಗದಿಪಡಿಸಿದರು. ಈ ಬಹುಮಾನದ ಪಂಥಾಹ್ವಾನ ಹಾಗೂ ಕೆಲವು ಇನ್ನು ವೈಭವಯುತ ಪಂಥ್ವಾನಗಳ ವಿವರ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಮಾಡುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 1ರ ಉಳಿದ ಭಾಗ)*

ಸಹ ಯಾವ ಮಟ್ಟದ ಉತ್ಸಾಹ, ನಿಷ್ಠೆ ಮತ್ತು ಸತ್ಯಸಂಧತೆ ದಯಪಾಲಿಸಿದ್ದಾನೆಂದರೆ ಅವರು ಇತರರಿಗೆ ಮಾದರಿಯಾಗಿದ್ದಾರೆ. ಯಾವ ದಿನದಂದು ನಾನು ನಸೀಬೈನ್ ಕಡೆ ಒಂದು ಜಮಾಅತನ್ನು ಕಳುಹಿಸಲು ನಿಶ್ಚಯಿಸಿದ್ದೇನೆ. ಅದರಿಂದ ಪ್ರತಿಯೊಬ್ಬರು ನಾ ಮುಂದು ತಾ ಮುಂದು ಎಂದು ಧಾವಿಸಿ ಬರುತ್ತಿದ್ದಾರೆ. ಒಬ್ಬರು ಮತ್ತೊಬ್ಬರನ್ನು ಭಾಗ್ಯರೂಪದಲ್ಲಿ ಕಾಣುತ್ತಾನೆ ಮತ್ತು ಬಯಕೆ ಹೊಂದಿರುತ್ತಾನೆ. ನನ್ನನ್ನು ಆರಿಸಿಕೊಂಡರೆ ನನ್ನ ಭಾಗ್ಯ ಎಂದು ತಿಳಿದುಕೊಳ್ಳುತ್ತಾರೆ. ಹಲವು ಬಂಧುಗಳು ಈ ಪ್ರವಾಸಕ್ಕಾಗಿ ತನ್ನನ್ನು ಪ್ರಸ್ತುತಪಡಿಸಿದರು. ನಾನು ಅವರ ಈ ಬೇಡಿಕೆಯ ಮೊದಲೇ ಮಿರ್ಝಾ ಖುದಾ ಬಕ್ಷ್ ಸಾಹಿಬ್ ಅವರನ್ನು ಆ ಪ್ರವಾಸಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೆ. ಮತ್ತು ಅವರ ಜೊತೆ ಮೌಲ್ವಿ ಖುತುಬುದ್ದೀನ್ ಹಾಗೂ ಮಿಯಾ ಜಮಾಲುದ್ದೀನ್ ಅವರನ್ನು ಕಳುಹಿಸಲು ನಿರ್ಧರಿಸಿಕೊಂಡಿದ್ದೆ. ಆದುದರಿಂದ ಈ ಬಂಧುಗಳ ಬೇಡಿಕೆಯನ್ನು ಅಲ್ಲಗಳೆಯಬೇಕಾಯಿತು. ಆದರೂ ನಾನು ಅವರ ಈ ನಿಷ್ಠೆ ನಿಷ್ಫಲಗೊಳ್ಳದು ಎಂದು ಭಾವಿಸುತ್ತೇನೆ. ಮತ್ತು ಅವರು ತನ್ನ ನಿಷ್ಠೆಯ ಫಲವನ್ನು ಅಲ್ಲಾಹನಿಂದ ಪಡೆಯುವರು.

**(ಮಲ್ಫೂಝಾತ್ ಸಂಪುಟ–1, ಪುಟ–306–307 ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮಧುರ ಕಂಠದಿಂದ ಪ್ರಸ್ತುತಪಡಿಸಿದರು. ಕವನ ಹಾಡುವವರಲ್ಲಿ ಯುವಕರ ಜೊತೆಯಲ್ಲಿ ಬಾಲಕರು ಸಹ ಜೊತೆಗೂಡಿದ್ದರು. ಮೆಸೆಡೋನಿಯನ್ ಭಾಷೆಯಲ್ಲಿ ಪ್ರಸ್ತುತಪಡಿಸಿದ ಕವನದ ಅನುವಾದ ಈ ಕೆಳಗಿನಂತಿದೆ. ಅಲ್ಲಾಹನು ಏಕನು ಎಂಬ ಮಾತಿನ ಘೋಷಣೆಯನ್ನು ಮಾಡಿರಿ, ಅದರ ಹೊರತು ಬೇರೆ ಆರಾಧ್ಯನಿಲ್ಲ ಹಝ್ರತ್ ನಬಿ ಕರೀಂ(ಸ) ಅವನ ಪ್ರಿಯಕರವಾಗಿದ್ದಾರೆ. ನಮ್ಮ ಧರ್ಮ ಇಸ್ಲಾಂ, ನಮ್ಮ ಮುಕ್ತಿ ಇಸ್ಲಾಂ ಧರ್ಮದಲ್ಲಿಯೇ ಇದೆ. ಇಸ್ಲಾಂ ನಮಗೆ ಕೇವಲ ಅಲ್ಲಾಹನೊಂದಿಗೆ ಪ್ರೀತಿಸುವುದು ಕಲಿಸುತ್ತದೆ. ಇಸ್ಲಾಮಿನ ಮೇಲೆ ಒಂದು ಕಾಲ ಹೀಗೆ ಬಂತು. ಅದು ದುರ್ಬಲವಾಯಿತು. ಮತ್ತೆ ಇಮಾಮ್ ಮಹದಿ ಆಗಮಿಸಿದರು. ಇಸ್ಲಾಮ್ ಧರ್ಮಕ್ಕೆ ಪುನಶ್ಚೇತನ ನೀಡಿದರು. ಅಲ್ಲಾಹನೊಡನೆ ನೀವು ನೇರವಾಗಿ ನೋಡುವ ರೀತಿಯಲ್ಲಿ ಪ್ರೀತಿಸಿರಿ. ಆದರೆ ನೀವು ನೋಡಲು ಶಕ್ತರಾಗಿಲ್ಲ ಎಂದಾದರೆ ಅವನಂತೂ

(ನ

ನಿಮ್ಮನ್ನು ನೋಡುತ್ತಿದ್ದಾನೆ. ಓ ಸತ್ಯವಿಶ್ವಾಸಿಗಳೇ ಅಲ್ಲಾಹನಿಂದ ಭಯಪಡುವವರಾಗಿರಿ. ಅಹ್ಮದಿ ಮುಸಲ್ಮಾನನಾಗದೇ ನಿಮಗೆ ಮರಣ ಬಾರದಿರಲಿ.

ಅನಂತರ ಕಾರ್ಯಕ್ರಮದನ್ವಯ ಖುದ್ದಾಮರ ಒಂದು ಗುಂಪು ಜರ್ಮನ್ ಭಾಷೆಯಲ್ಲಿ ಮಧುರ ಕಂಠದಿಂದ ಒಂದು ಕವನ ಪ್ರಸ್ತುತಪಡಿಸಿದರು.

ಅನಂತರ ಅತ್ಫಾಲ್ ಬಾಲಕರ ಒಂದು ಗುಂಪು ಪ್ರಾರ್ಥನಾ ರೂಪದಲ್ಲಿ ಒಂದು ಕವನ ಪ್ರಸ್ತುತಪಡಿಸಿದರು. ಬಾಲಕರ ಇನ್ನೊಂದು ಗುಂಪು ಸಹ ಪ್ರಾರ್ಥನೆ ಗೀತೆ ಪ್ರಸ್ತತಪಡಿಸಿದರು.

ಖುದ್ದಮರ ಒಂದು ಗುಂಪು ಸಹ ಒಂದು ಕವನ ಪ್ರಸ್ತುತಪಡಿಸಿತು. ಕೊನೆಯಲ್ಲಿ ಜಾಮಿಯಾ ಅಹ್ಮದಿಯಾ ಜರ್ಮನಿಯ ವಿದ್ಯಾರ್ಥಿಯರು ಖಿಲಾಫತ್‌ನೊಂದಿಗೆ ಸಂಬಂಧವನ್ನು ತೋರುವ ಹಾಗೂ ನಿಷ್ಠೆ ಹೊಂದುವ ಬಗ್ಗೆ ಪ್ರಾರ್ಥನೆ ಕವನ ಪ್ರಸ್ತುತಪಡಿಸಿದರು. ಅತ್ಯಂತ ಆಹ್ಲಾದಕರ ವಾತಾವರಣದಲ್ಲಿ ಇವೆಲ್ಲ ಕವನಗಳು ಪ್ರಸ್ತುತಪಡಿಸಲಾಯಿತು. ಈ ಕಾರ್ಯಕ್ರಮ ಅಂತ್ಯಗೊಳ್ಳುತ್ತಲೇ ಜಮಾಅತ್ ಬಾಂಧವರು ತುಂಬು ಉತ್ಸಾಹದಿಂದ ಘೋಷಣೆಗಳನ್ನು ಹಾಕಿದರು. ಇಡೀ ಪರಿಸರ ಘೋಷಣೆಗಳಿಂದ ಧ್ವನಿಗೂಡಿತು. ಪ್ರತಿಯೊಬ್ಬ ಹಿರಿಯರು, ಕಿರಿಯರು, ಯುವಕನು, ವೃದ್ಧರು ತನ್ನ ಪ್ರೀತಿಯ ಖಲೀಫರೊಡನೆ, ಪ್ರೀತಿ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು. ಇದು ಜಲ್ಸದ ಅಂತಿಮ ಕ್ಷಣಗಳಾಗಿದ್ದವು. ಹೃದಯಗಳು ಪ್ರೀತಿ ವಿಶ್ವಾಸದಿಂದ ಉಕ್ಕುತ್ತಿದ್ದವು. ಕಣ್ಣುಗಳು ತೇವಗೊಂಡಿದ್ದವು. ಇಂತಹ ವಾತಾವರಣದಲ್ಲಿ ಹುಝೂರ್ ತನ್ನ ಕೈಯನ್ನು ಬೀಸುತ್ತ ತನ್ನ ಪ್ರೇಮಿಗಳಿಗೆ ಅಸ್ಸಲಾಮು ಅಲೈಕುಂ ಮತ್ತು ಖುದಾ ಹಾಫೀಝ್ ಎಂದು ಉಚ್ಚರಿಸಿದರು. ಘೋಷಣೆಗಳ ಮಧ್ಯೆ ಜಲ್ಸಸ್ಥಳದಿಂದ ಹೊರ ಬಂದು ಸ್ವಲ್ಪ ಸಮಯಕ್ಕಾಗಿ ತನ್ನ ವಸತಿಯತ್ತ ತೆರಳಿದರು. **(ಮುಂದುವರಿಯುವುದು)**

### ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

### ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗ್ರತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

### ವಿಷೇಶ ಸೂಚನೆ

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
**ಮೊಬೈಲ್ ಸಂಖ್ಯೆ: 9866358609** (ವ್ಯವಸ್ಥಾಪಕರು)

### ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಅ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

### ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳಿಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳಿಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು "ತಹ್ರೀಕ್ ಜದಿದ್ ಹಫ್ತಮಾಲ್" ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಿಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. "ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝ್ಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

### ಇನ್ಸಾನಿಯತ್ ಝಿಂದಾಬಾದ್
### ಮಾನವೀಯತೆ ಚಿರಕಾಲ ಬಾಳಲಿ

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 08 July 2021, Issue No. 27

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 26ರ ವರದಿಯ ಉಳಿದ ಭಾಗ)**

ಹುಝೂರೆ ಅನ್ವರ್(ಅಬಿಅ) ಅರುಹಿದರು.

ವಿವಿಧ ಸಂದರ್ಭಗಳಲ್ಲಿ ನಿನ್ನೆ ಜರ್ಮನ್ ಮುಸ್ಲಿಮೇತರರ ಅತಿಥಿಗಳೊಡನೆ ಇದ್ದ ಸಭೆಯಲ್ಲಿ ನಾನು ಹಝ್ರತ್ ರಸೂಲುಲ್ಲಾಹ್(ಸ) ಮತ್ತು ಪವಿತ್ರ ಖುರ್‌ಆನ್‌ನಿಂದ ಜಿಹಾದ್ ಮತ್ತು ಶಾಂತಿ ಕುರಿತು ಇಸ್ಲಾಮಿ ಶಿಕ್ಷಣವನ್ನು ಪ್ರಸ್ತುತಪಡಿಸಿದ್ದೆ. ಅದರ ಮೇಲೆ ಕೆಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ಸಹ ವ್ಯಕ್ತಪಡಿಸಿದ್ದಾರೆ. ಈ ಮಾತುಗಳನ್ನು ಕೇಳಿ ಇಸ್ಲಾಮಿನ ಕುರಿತು ಇರುವ ನಮ್ಮ ಭಾವನೆಗಳು ಬದಲಾಗಿವೆ. ಹೆಚ್ಚಿನ ಅತಿಥಿಗಳು ಅವರಲ್ಲದೆ ವಿವಿಧ ಸಂದರ್ಭಗಳಲ್ಲಿ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದ್ದಾರೆ. ನಾವು ಜಮಾಅತ್‌ನ್ನು ಅರಿತಿದ್ದೇನೆ. ಯಾವ ಅಹ್ಮದಿಯರೊಂದಿಗೆ ನಮ್ಮ ಸಂಪರ್ಕ ಇದೆಯೋ ಅವರು ನಮಗೆ ಇಸ್ಲಾಮಿನ ಸುಂದರವಾದ ಶಿಕ್ಷಣವನ್ನು ತಿಳಿಸಿರುತ್ತಾರೆ. ಅಂದ ಹಾಗೆ ಈ ಶಿಕ್ಷಣ ಹೇಳಿಕೊಡುವುದು ನಮ್ಮಲ್ಲಿ ಪ್ರತಿಯೊಬ್ಬರ ಕಾರ್ಯವಾಗಿದೆ. ಇದು ಪವಿತ್ರ ಖುರ್‌ಆನ್ ನೀಡಿದ ಶಿಕ್ಷಣವೇ ಆಗಿದೆ. ತಬ್ಲೀಗಿನ ಜಾಣ್ಮೆಯ ಪದದಲ್ಲಿ ಅಲ್ಲಾಹನು ನಮಗೆ ತಿಳಿಸಿಕೊಟ್ಟಿದ್ದೇನೆಂದರೆ ಇನ್ನೊಬ್ಬನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಮಾತನಾಡಬೇಕು. ಒಬ್ಬ ಸಾಧಾರಣ ಮನುಷ್ಯನ ಮುಂದೆ ತಮ್ಮ ವಿದ್ಯಾ ಕಸರತ್ತು ಮಾಡ ಹೊರಟರೆ ಏನು ಪ್ರಯೋಜನವಿಲ್ಲ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದ್ದೇನೆಂದರೆ, ಜನರೊಂದಿಗೆ ಅವರ ತಿಳುವಳಿಕೆ ಸಾಮರ್ಥ್ಯಕ್ಕನುಗುಣವಾಗಿ ವರ್ತಿಸಿರಿ. ಇದು ತುಂಬ ಮಹತ್ವದ ಮಾತಾಗಿದೆ.

ಹುಝೂರೆ ಅನ್ವರ್(ಅಬಿಅ) ಹೇಳುತ್ತಾರೆ.

ಅಲ್ಲಾಹನು ಹೇಳುವನು. ನಿಮ್ಮ ಕಾರ್ಯಗಳಲ್ಲಿ ಅತ್ಯುತ್ತಮ ಕಾರ್ಯ, ನಿಮ್ಮ ಮಾತುಗಳಲ್ಲಿ ಅತ್ಯುತ್ತಮ ಮಾತೆಂದರೆ ನೀವು ಅಲ್ಲಾಹನ ಸಂದೇಶವನ್ನು ಸತ್ಯದಿಂದ, ಜಾಣ್ಮೆ ಮತ್ತು ಸದುಪದೇಶದಿಂದ ಲೋಕಕ್ಕೆ ತಲುಪಿಸಿರಿ. ಏಕೆಂದರೆ ಅಲ್ಲಾಹನಿಗೆ ಅದೇ ಮಾತು ಅಧಿಕ ಮಾನವೀಯವಾಗಿದೆ. ಅಲ್ಲಾಹನ ಈ ಆಜ್ಞೆಯ ಮೇಲೆ ನಡೆದಾಗ ಮಾತ್ರ ನೀವು ಅವನ ಮೆಚ್ಚುಗೆಗೆ ಪಾತ್ರರಾಗುವಿರಿ. ಅಲ್ಲಾಹನಿಗೆ ಅತ್ಯಂತ ಪ್ರಿಯವಾದ ಮಾತೆಂದರೆ ಮನುಷ್ಯನು ಶೈತಾನನ ಹಿಡಿತದಿಂದ ಹೊರಬಂದು ನಿಜವಾದ ಭಕ್ತದಾಸನಾಗಬೇಕು. ಅದರ ಲಾಭ ಅಲ್ಲಾಹನಿಗೆ ಅಲ್ಲ. ಬದಲು ಸ್ವಯಂ ಮನುಷ್ಯನಿಗೆ ಆಗುವುದು. ಅಲ್ಲಾಹನು ಹೇಳುವನು. ನಿಮ್ಮ ಆರಾಧನೆಗಳಿಂದ ನನಗೇನು ಆಗಬೇಕಾಗಿದೆ. ಏನು ವ್ಯತ್ಯಾಸ ಆಗಲು ಸಾಧ್ಯ. ಶೈತಾನನಿಗೂ ಸಹ ಅಲ್ಲಾಹನು ತನ್ನ ದಾಸರನ್ನು ಪರೀಕ್ಷಿಸಲು ಸ್ವಾತಂತ್ರ್ಯ ನೀಡಿರುತ್ತಾನೆ. ಅವನು ಏನು ಪ್ರಯತ್ನ ಮಾಡಬೇಕಾಗಿದೆ. ಮಾಡಿಕೊಳ್ಳಲಿ. ಆದರೆ ಪ್ರವಾದಿಗಳ ಮೂಲಕ ನಮಗೆ ಮಾರ್ಗದರ್ಶನ ಒದಗಿಸಿರುವನು. ಅಂತೆಯೇ ಪ್ರವಾದಿಗಳ ಅನುಯಾಯಿಗಳಿಗೆ ಆಜ್ಞೆ ನೀಡಿದನು. ಪ್ರವಾದಿಗಳ ಕಾರ್ಯವನ್ನು ನೀವು ಮುಂದುವರೆಸಿರಿ ಮತ್ತು ಅಲ್ಲಾಹನೆಡೆಗೆ ಆಹ್ವಾನಿಸುವ ಕಾರ್ಯ ಎಂದೂ ಅಂತ್ಯಗೊಳಿಸಬೇಡಿ.

ಹುಝೂರೆ ಅನ್ವರ್(ಅಬಿಅ) ನುಡಿದರು.

ಅಂದ ಹಾಗೆ ಈ ಕಾಲದಲ್ಲಿ ಎಲ್ಲ ಶೈತಾನ ಅಥವಾ ಶೈತಾನ ಶಕ್ತಿಗಳು ತನ್ನೆಲ್ಲ ಬಲಗಳಿಂದ ಲೋಕವನ್ನು ಶೈತಾನನ ಅಧೀನಗೊಳಿಸಲು ಹಂಬಲಿಸುತ್ತದೆಯೋ ಅಲ್ಲೇ ಇನ್ನೊಂದು ಕಡೆಯಿಂದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ರವರ ಜಮಾಅತಿನ ಮೇಲೆ ಈ ಹೊಣೆಯನ್ನು ಹಾಕಿದೆ. ಲೋಕಕ್ಕೆ ಸನ್ಮಾರ್ಗವನ್ನು ತೋರಿಸಿರಿ, ನಾನು ಖುತುಬ ಜುಮುಅದಲ್ಲಿ ಹೇಳಿರುವ ಹಾಗೆ ಈ ಧೃತಿಗೆಟ್ಟ ಸಮಯದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಹೊಸ ಭೂಮಿ, ಹೊಸ ಅಕಾಶ ಸೃಷ್ಟಿಸಲು ಕಳುಹಿಸಿರುತ್ತಾನೆ. ಈಗ ನಮ್ಮಲ್ಲಿ ಪ್ರತಿಯೊಬ್ಬರು ಹೊಸ ಭೂಮಿ, ಹೊಸ ಆಕಾಶ ನಿರ್ಮಾಣ ಕಾರ್ಯದಲ್ಲಿ ತಮ್ಮ ಪಾತ್ರ ವಹಿಸಬೇಕಾಗಿದೆ. ತಮ್ಮ ಹೃದಯದ ಭೂಮಿಯನ್ನು ಸಮತಟ್ಟುಗೊಳಿಸಿ. ಅಲ್ಲಾಹನ ಸ್ಮರಣೆಯಿಂದ ಸಜ್ಜುಗೊಳಿಸಬೇಕಾಗಿದೆ. ಲೋಕಕ್ಕೆ ಹೊಸ ಭೂಮಿ, ಹೊಸ ಆಕಾಶ ನಿರ್ಮಾಣದ ಸಾರವು ಕಲಿಸಬೇಕಾಗಿದೆ. ಅಂತೂ ಈ ಎರಡು ಗುಂಪುಗಳಿವೆ. ಒಂದು ಶೈತಾನನ ವಶದಲ್ಲಿ ಬರುವವರು. ಇನ್ನೊಂದು ಅಲ್ಲಾಹನೆಡೆಗೆ ಆಹ್ವಾನಿಸುವವರು. ಇಂದು ಭೂಮಂಡಲದಲ್ಲಿ ಅಲ್ಲಾಹನೆಡೆಗೆ ನಿಜ ರೂಪದಲ್ಲಿ ಆಹ್ವನಿಸುವ ಪಾತ್ರ ನಿರ್ವಹಿಸುವ ಯಥಾರ್ಥ ಜಮಾಆತ್ ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ನಾವು ಈ ಜಮಾಅತಿಗೆ ಸೇರಿದ್ದು ಅಲ್ಲಾಹನ ನಮ್ಮ ಮೇಲೆ ಬಹು ದೊಡ್ಡ ಉಪಕಾರವಾಗಿದೆ. ಈ ಉಪಕಾರದ ಕೃತಜ್ಞತೆ ಸಲ್ಲಿಸಲು ನಮ್ಮಲ್ಲಿ ಪ್ರತಿಯೊಬ್ಬರಿಗೆ ತಮ್ಮ ಜವಾಬ್ಧಾರಿಗಳನ್ನು ನಿರ್ವಹಿಸುವ ಕಡೆ ಗಮನ ಹರಿಸಬೇಕಾಗಿದೆ. ಮತ್ತು ಪ್ರಯತ್ನಪಡಬೇಕಾಗಿದೆ. ಈ ಪ್ರಯತ್ನಗಳನ್ನು ಮಾಡುತ್ತ ಅಲ್ಲಾಹನೆಡೆಗೆ ಆಹ್ವಾನಿಸುವ ಕರ್ತವ್ಯವನ್ನು ಪಾಲಿಸುವತ್ತ ಮೊದಲಿಗಿಂತ ಹೆಚ್ಚು ಮುಂಬರಬೇಕಾಗಿದೆ. ಅಲ್ಲಾಹನ ಗ್ರಂಥಧ ಶೂಕ್ಷ್ಮಾತಿಸೂಕ್ಷ್ಮ ಸಾಕ್ಷ್ಯಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ಬಿಡಿಸಿ ತಿಳಿಸಿರುವವರು, ಅದೊಂದು ಕೊನೆಗೊಳ್ಳದ ಖಜಾನೆಯಾಗಿದೆ. ಆದುದರಿಂದ ಹಝ್ರತ್ ರಸೂಲುಲ್ಲಾಹ್(ಸ) ರವರ ಹದೀಸಿನ ಮೇಲೆ ನಡೆದುಕೊಳ್ಳುತ್ತ ತಮಗೆ ಬಯಸಿದ್ದನ್ನು ತನ್ನ ಸಹೋದರನಿಗೆ ಬಯಸುವುದು ನಮ್ಮ ಕರ್ತವ್ಯವಾಗಿದೆ. ಪವಿತ್ರ ಖುರ್‌ಆನ್‌ನ ಶಿಕ್ಷಣದಿಂದ ತುಂಬಿದ ಈ ಖಜಾನೆಯ ಜ್ಞಾನವನ್ನು ಜಾಣ್ಮೆಯಿಂದ ಮುಸ್ಲಿಮರವರೆಗೂ ತಲುಪಿಸಬೇಕಾಗಿದೆ. ಮತ್ತು ಮುಸ್ಲಿಮೇತರರಿಗೂ ತಲುಪಿಸಬೇಕಾಗಿದೆ ಮತ್ತು ಅವರನ್ನು ಶೈತಾನನ ಚಂಗುಲದಿಂದ ಬಿಡಿಸಿ ಅವರಿಗೆ ಅಲ್ಲಾಹನ ಯಥಾರ್ಥ ದಾಸರನ್ನಾಗಿ ಮಾಡಬೇಕಾಗಿದೆ. ಅವರನ್ನು ನಾಮಧಾರಿ ಉಲಮಾಗಳ ಚಂಗುಲದಿಂದ ಬಿಡಿಸಬೇಕಾಗಿದೆ ಅವರನ್ನು ಈಗ ಈ ಕಾಲಘಟ್ಟದ ಇಮಾಮರಿಂದ ದೂರ ಮಾಡುತ್ತಿದ್ದಾರೆ ಮತ್ತು ಅದಕ್ಕಾಗಿ ಈ ಜನರು ತಮ್ಮೆಲ್ಲ ಶಕ್ತಿಗಳನ್ನು ಉಪಯೋಗಿಸುತ್ತಿದ್ದಾರೆ.

ಹುಝೂರೆ ಅನ್ವರ್(ಅಬಿಅ) ನುಡಿದರು.

ಅಲ್ಲಾಹನ ಅನುಗ್ರಹದಿಂದ ಹಿಂದಿನ ವರ್ಷಗಳಿಗಿಂತ ಇಲ್ಲಿಯೂ ಸಹ ಮತ್ತು ಲೋಕದ ಎಲ್ಲ ದೇಶಗಳಲ್ಲೂ ಈ ಗಾಲಿ ಬೀಸಿದೆ. ಪರಿಚಯ ಹೆಚ್ಚಾಗತೊಡಗಿದೆ. ಜನರು ಅಹ್ಮದಿಯತ್ತಿನ ಸಮೀಪ ಬರತೊಡಗಿದ್ದಾರೆ. ವಿಸ್ತೃತರೂಪದಲ್ಲಿ ಅಹ್ಮದಿಅತ್ತನ್ನು ತಿಳಿದುಕೊಂಡಿರುತ್ತಾರೆ. ದೇಶಗಳ ದೊಡ್ಡ ದೊಡ್ಡ ನಗರಗಳಲ್ಲೂ ಸಹ ಜನರು ಈಗ ಅಹ್ಮದಿಅತ್ತಿನ ಬಗ್ಗೆ ತಿಳಿದವರಾಗಿದ್ದಾರೆ. ಅವರಲ್ಲಿ ಮುಸ್ಲಿಮರು ಮತ್ತು ಮುಸ್ಲಿಮೇತರು ಎಲ್ಲರೂ ಶಾಮೀಲಾಗಿದ್ದಾರೆ. ಆದರೆ ಅದಕ್ಕಾಗಿ ನಾವು ಸಹ ತಮ್ಮ ಸ್ಥಿತಿಗಳನ್ನು ಕರ್ಮಗಳ ಮಾದರಿಯನ್ನಾಗಿ ಹೃದಯಗಳನ್ನು ಪರಿವರ್ತಿಸಲು ದುಆ ಮಾಡುವ ಹಕ್ಕನ್ನು ಪಾಲಿಸುವ ಪ್ರಯತ್ನ ಮಾಡಬೇಕಾಗಿದೆ.

ಹುಝೂರೆ ಅನ್ವರ್(ಅಬಿಅ) ರವರ ಈ ಪರಿಪೂರ್ಣ ಭಾಷಣ ಮುಂದೆ ಇನ್‌ಶಾಅಲ್ಲಾಹ್ ಯಾವುದೇ ಸಂಚಿಕೆಯಲ್ಲಿ ಪ್ರಕಟವಾಗುವುದು.

ಹುಝೂರೆ ಅನ್ವರ್(ಅಬಿಅ) ರವರ ಈ ಭಾಷಣ 6 ಗಂಟೆ ಹತ್ತು ನಿಮಿಷದವರೆಗೆ ಜಾರಿಯಲ್ಲಿತ್ತು. ನಂತರ ದುಆ ಮಾಡಿಸಿದರು.

ಅನಂತರ ಹುಝೂರ್(ಅಬಿಅ) ಜಲ್ಸ ಸಾಲಾನ ಜರ್ಮನಿಯ ಹಾಜರಿ ತಿಳಿಸಿದರು. ಈ ವರ್ಷ ಜಲ್ಸದ ಒಟ್ಟು ಹಾಜರಿ 36,067 ಆಗಿದೆ. ಪುರುಷರ ಹಾಜರಿ 17,560 ಮತ್ತು ಸ್ತ್ರೀಯರ ಹಾಜರಿ 16,845 ಅದಲ್ಲದೇ 1,632 ಸಂಖ್ಯೆಯಲ್ಲಿ ತಬ್ಲೀಗಿ ಅತಿಥಿಗಳು ಶಾಮೀಲಾಗಿದ್ದಾರೆ.

ಈ ಜಲ್ಸದಲ್ಲಿ 55 ದೇಶಗಳ ಪ್ರತಿನಿಧಿತ್ವವಿತ್ತು. 3024 ಅತಿಥಿಗಳು ವಿವಿಧ ದೇಶಗಳಿಂದ ಜಲ್ಸ ಸಾಲನ ಜರ್ಮನಿಗೆ ಹಾಜರಾಗಿದ್ದರು.

ಅನಂತರ ಕಾರ್ಯಕ್ರಮದನ್ವಯ ಆಫ್ರಿಕನ್ ಅಹ್ಮದಿ ಬಾಂಧವರು ತಮ್ಮ ವಿಶಿಷ್ಠ ಶೈಲಿಯಲ್ಲಿ ತನ್ನ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಕಲಿಮ ತಯ್ಯಬ ಉಚ್ಚರಿಸಿದರು.

ಮತ್ತೆ ಅರೆಬಿಯನ್ ಬಾಂಧವರು ಹಝ್ರತ್ ರಸೂಲುಲ್ಲಾಹ್(ಸ) ರವರ ಸ್ತುತಿಯಲ್ಲಿ ಹಝ್ರತ್ ಅಕ್‌ದಸ್ ಮಸೀಹ್ ಮೌಊದ್(ಅ) ರವರ ಅರಬಿ ಖಸೀದ ಅತ್ಯಂತ ಉತ್ಸಾಹಪೂರ್ಣದಿಂದ ಪ್ರಸ್ತುತಪಡಿಸಿದರು.

ಅನಂತರ ಮೆಸೆಡೋನಿಯಾ ದೇಶದಿಂದ ಆಗಮಿಸಿದ ನೌಮುಬಾಯೀನ್ ತನ್ನ ಮೆಸೆಡೋಮಿಯನ್ ಭಾಷೆಯಲ್ಲಿ ಒಂದು ಕವನ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.